ಸಂಪುಟ : 8 ಸಂಚಿಕೆ : 83 ಪುಟ : 4 ಬೆಲೆ : 3.00 ಮಂಗಳವಾರ ಮೇ 02, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 83 Pages : 4 Price : 3.00 Tuesday May 02, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

ಸೇನಾ ಹವಾಲ್ದಾರ ಕರಬಸಪ್ಪ ಅಯ್ಯಣ್ಣವರ ಅವರಿಗೆ ಸ್ವಾಗತ ಕಾರ್ಯಕ್ರಮ

## 'ನಿವೃತ್ತ ಸೈನಿಕರು ನಮ್ಮ ಸಮಾಜದ ಹೆಮ್ಮೆ'



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ದೇಶ ಕಾಯುವ ಯೋಧನಿಗೆ ಸಮಾಜದಲ್ಲಿ ಶ್ರೇಷ್ಠವಾದ ಗೌರವವಿದ್ದು ಇಂತಹ ಶ್ರೇಷ್ಠ ಸೇವೆ ಮುಗಿಸಿ ತವರೂರಿಗೆ ಆಗಮಿಸುವ ನಿವೃತ್ತ ಸೇನಾ ಹವಾಲ್ದಾರ ಕರಬಸಪ್ಪ ಅಯ್ಯಣ್ಣವರು ನಮ್ಮ ಸಮಾಜದ ಹೆಮ್ಮೆಯಾಗಿದ್ದಾರೆ ಎಂದು ಸೈನಿಕರ ಸಂಘದ ಗದಗ ಜಿಲ್ಲಾ ಮಾಜಿ ಅಧ್ಯಕ್ಷ ಬಸಲಿಂಗಪ್ಪ ಮುಂಡರಗಿ ಹೇಳಿದರು.

ಅವರು ಪಟ್ಟಣದಲ್ಲಿ ಸೋಮವಾರ ಸೇನೆಯಲ್ಲಿ ಸೇವಾವಧಿ ಪೂರ್ಣಗೊಳಿಸಿ ಪಟ್ಟಣಕ್ಕೆ ಆಗಮಿಸಿದ ಸಂದರ್ಭದಲ್ಲಿ ಕರಬಸಪ್ಪ ಅಯ್ಯಣ್ಣವರ ಅವರನ್ನು ಮಾಜಿ ಸೈನಿಕರು, ಅಭಿಮಾನಿಗಳು ಮೆರವಣಿಗೆಯ ಮೂಲಕ ಸ್ವಾಗತಿಸಿದರು.

ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುವುದು ಜೀವನ ಸಾಧನೆ ಮತ್ತು ಪುಣ್ಯದ ಸೇವೆ ಎಂದು ಭಾವಿಸಿದ್ದೇನೆ. ಯುವಶಕ್ತಿ ದುಶ್ಚಟಗಳಿಗೆ ಬಲಿಯಾಗದೇ ಭಾರತದ ಶಕ್ತಿಯಾಗಿ ದೇಶ ಕಾಯುವ ಸೇವಕನಾಗಬೇಕು. ಸೇನೆಯಲ್ಲಿ ದೇಶದ ಬಗ್ಗೆ ಪ್ರೀತಿ, ಅಭಿಮಾನ, ದೇಶಭಕ್ತಿ, ಪ್ರಾಮಾಣಿಕತೆ, ನಿಷ್ಠೆ, ಕರ್ತವ್ಯಪಾಲನೆ ಕಲಿಸಿ ಪರಿಪೂರ್ಣ ವ್ಯಕ್ತಿಯನ್ನಾಗಿಸಲಾಗುತ್ತದೆ ಎಂದರು.

ಮಾಜಿ ಸೈನಿಕರಾದ ಮಲ್ಲಿಕಾರ್ಜುನ ▶▶3 ನೇ ಪುಟಕ್ಕೆ

ಮಾಜಿ ಸಿಎಂ ಸಿದ್ದರಾಮಯ್ಯ ಆರೋಪ * ಶಿರಹಟ್ಟಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ

# 'ಬಿಜೆಪಿ ಸರಕಾರ ಶೇ.100 ಭ್ರಷ್ಟಾಚಾರದಿಂದ ತುಂಬಿದೆ'

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರಕಾರ ಶೇ. 100 ರಷ್ಟು ಭ್ರಷ್ಟಾಚಾರದಿಂದ ತುಂಬಿದ್ದು ರಾಜ್ಯದ ಬೊಕ್ಕಸವನ್ನು ಖಾಲಿ ಮಾಡಿದೆ. 40% ಕಮೀಶನ್ ಬಗ್ಗೆ ಗುತ್ತಿಗೆದಾರ ಸಂಘದ ಅಧ್ಯಕ್ಷ ಕೆಂಪಣ್ಣ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದರೂ ಇಲ್ಲಿಯವರೆಗೂ ಕ್ರಮ ವಹಿಸಿಲ್ಲ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಬಿಜೆಪಿ ವಿರುದ್ಧ ಹರಿಹಾಯ್ದರು.

ಅವರು ಸೋಮವಾರ ಶಿರಹಟ್ಟಿ ತಾಲೂಕಿನ ಬೆಳ್ಳಟ್ಟಿ ಗ್ರಾಮದಲ್ಲಿ ಶಿರಹಟ್ಟಿ ಮೀಸಲು ಮತಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುಜಾತಾ ದೊಡ್ಡಮನಿ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದರು.

ಅಧಿಕಾರಿಗಳ ವರ್ಗಾವಣೆಯಲ್ಲಿ, ಎಲ್‌ಓಸಿ ರಿಲೀಸ್ ಮಾಡುವಾಗ ಹಣ ನೀಡಬೇಕು, ಕೆ.ಆರ್.ಪುರಂನಲ್ಲಿ ನಂದೀಶ್ ಎಂಬ ಇನ್ಸಪೆಕ್ಟರ್ 70–80ಲಕ್ಷ ನೀಡಿ ವರ್ಗಾವಣೆ ಮಾಡಿಸಿಕೊಂಡಿದ್ದರು ಎಂಬ ಹೇಳಿಕೆಯನ್ನು ಮಂತ್ರಿಯಾಗಿದ್ದ ಎಂಟಿಬಿ ನಾಗರಾಜ ಅವರೇ ಹೇಳಿದ್ದನ್ನ ನಾವು ನಂಬಬೇಕೋ ಬೇಡವೋ ? ಇತ್ತೀಚೆಗೆ ಮಾಡಾಳ್ ವಿರುಪಾಕ್ಷಪ್ಪ ಅವರ ಮಗ ಲಂಚ ತೆಗೆದುಕೊಳ್ಳುವಾಗ ಲೋಕಾಯುಕ್ತರ ಕೈಗೆ ರೆಡ್ ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದಾರೆ. ಅವರಿಂದ 8ಕೋಟಿ ರೂ. ನಗದು ವಶಪಡಿಸಿಕೊಂಡಿದ್ದಾರೆ, ಓರ್ವ ಎಡಿಜಿಪಿ ಇನ್ನೂ ಜೈಲಲ್ಲಿದ್ದಾರೆ, ಈಶ್ವರಪ್ಪ ಅವರು 40% ಕಮೀಶನ್ ಕೇಳಿದ್ದರು ಎಂದು ಗುತ್ತಿಗೆದಾರ ಡೆತ್ ನೋಟ್ ಬರೆದಿಟ್ಟಿದ್ದು ದಾಖಲೆ ಅಲ್ವಾ ಮತ್ತೆ ನಮಗೆ ದಾಖಲೆ ಕೊಡಿ ಎಂದು ಹೇಳುತ್ತೀರಲ್ಲ. ಬಸವರಾಜ ಬೊಮ್ಮಾಯಿ, ನಿಮ್ಮದು 100% ಭ್ರಷ್ಟಾಚಾರದ ಸರಕಾರ ಎಂದು ಟೀಕಿಸಿದರು.



ಮಾಜಿ ಸಚಿವ ಎಚ್.ಕೆ.ಪಾಟೀಲ ಮಾತನಾಡಿ, ಬಿಜೆಪಿ ಸರಕಾರ ಶೇ.10ರಷ್ಟು ಭರವಸೆ ಈಡೇರಿಸಿಲ್ಲ. ಮಾಜಿ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ನೀಡಿದ 165 ಭರವಸೆಗಳಲ್ಲಿ 158ನ್ನು ಪೂರೈಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಆದ್ದರಿಂದ ಕೆಪಿಸಿಸಿ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ ಹಾಗೂ ಸಿದ್ದರಾಮಯ್ಯ ಅವರ ಕೈಬಲಪಡಿಸುವುದಕ್ಕಾಗಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸುಜಾತಾ ದೊಡ್ಡಮನಿ ಅವರಿಗೆ ಮತ ನೀಡಬೇಕೆಂದು ಮನವಿ ಮಾಡಿದರು.

ರಾಜ್ಯ, ಜಿಲ್ಲಾ ಹಾಗೂ ಸ್ಥಳೀಯ ಮುಖಂಡರುಗಳ ಸಮೀಕ್ಷೆಯ ಆಧಾರದ ಮೇಲೆ ಸುಜಾತಾ ದೊಡ್ಡಮನಿಯವರಿಗೆ ಕಾಂಗ್ರೆಸ್ ಟಿಕೆಟ್ ನೀಡಲಾಗಿದೆ. ಸಾಮಾಜಿಕ ನ್ಯಾಯವನ್ನು ಸಹ ಕಾಪಾಡಲಾಗಿದೆ. ಒಬ್ಬ ಮಹಿಳೆಗೆ ಟಿಕೆಟ್ ನೀಡಿದ್ದು ಸಮಂಜಸವಾಗಿದೆ. ಚುನಾವಣಾ ಪ್ರಣಾಳಿಕೆಯಲ್ಲಿ ಮಹಿಳೆಯರಿಗೆ ಆದ್ಯತೆ ನೀಡಿದ್ದೇವೆ ಎಂದು ಸಿದ್ದರಾಮಯ್ಯ ಹೇಳಿದರು.

130 ವರ್ಷಗಳ ಇತಿಹಾಸ ಹೊಂದಿರುವ ಕಾಂಗ್ರೆಸ್ ಪಕ್ಷ ನನಗೆ ಟಿಕೆಟ್ ನೀಡಿದ್ದು ಕ್ಷೇತ್ರದ ಎಲ್ಲ ಮಹಿಳೆಯರಿಗೆ ಸಲ್ಲುತ್ತದೆ. ನಾನು ಹೊರಗಿನವಳಲ್ಲ, ಲಕ್ಷ್ಮೇಶ್ವರದಲ್ಲಿ ಹುಟ್ಟಿ ಶಿರಹಟ್ಟಿಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನಿಮ್ಮ ಮನೆ ಮಗಳು ಎಂದು ಭಾವಿಸಿ ನನಗೆ ಮತ ಭಿಕ್ಷೆಯನ್ನು ನೀಡಬೇಕೆಂದು ಅಭ್ಯರ್ಥಿ ಸುಜಾತಾ ದೊಡ್ಡಮನಿ ಮತಯಾಚಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ, ಕೆ.ಬಿ.ಕೋಳಿವಾಡ, ಜಿ.ಎಸ್.ಗಡ್ಡದ್ದೇವರಮಠ, ಐ.ಜಿ.ಸನದಿ, ಎಂ.ಪಿ.ನಾಡಗೌಡ, ಅಜ್ಜಂಪೀರ ಖಾದ್ರಿ, ಶಿರಹಟ್ಟಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹುಮಾಯೂನ್ ಮಾಗಡಿ, ಶಿವಕುಮಾರಗೌಡ ಪಾಟೀಲ, ವಾಯ್.ಎನ್.ಗೌಡರ, ಡಿ.ಕೆ. ಹೊನ್ನಪ್ಪನವರ, ಮಹೇಂದ್ರ ಮುಂಡವಾಡ, ಶಿವನಗೌಡ ಪಾಟೀಲ, ಆರ್.ಆರ್.ಗಡ್ಡದ್ದೇವರಮಠ, ಜಗದೀಶ ಗಾಂಜಿ, ಜಿ.ಆರ್.ಕೊಪ್ಪದ, ಸುಶೀಲವ್ವ ಲಮಾಣಿ, ಜಯಕ್ಕ ಕಳ್ಳಿ, ರಾಮಣ್ಣ ಲಮಾಣಿ (ಶಿಗ್ಲಿ), ಗುರಪ್ಪ ಲಮಾಣಿ, ದೇವಪ್ಪ ಲಮಾಣಿ, ದೀಪಕ ಲಮಾಣಿ, ರಾಜು ದಾವಣಗೆರೆ, ಹೊನ್ನಪ್ಪ ಶಿರಹಟ್ಟಿ, ಪರಮೇಶ ಪರಬ, ವಿ.ಪಿ.ಮಠಪತಿ, ಸುರೇಶ ಮಾಗಡಿ, ವಿರುಪಾಕ್ಷಪ್ಪ ನಂದೆಣ್ಣವರ ಮುಂತಾದವರು ಉಪಸ್ಥಿತರಿದ್ದರು.

ಶಾಸಕ ಬಂಡಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಲಕ್ಷ್ಮಣ ಸವದಿ

## ಕುಟುಂಬವನ್ನೇ ರಕ್ಷಿಸಿಕೊಳ್ಳದವರು ಕ್ಷೇತ್ರವನ್ನು ಹೇಗೆ ರಕ್ಷಿಸಬಲ್ಲರು?

■ವಿಜಯಸಾಕ್ಷಿ ಸುದ್ದಿ, ರೋಣ

ತನ್ನ ಕುಟುಂಬವನ್ನೇ ರಕ್ಷಿಸಿಕೊಳ್ಳದವರು ಇನ್ನು ಇಡೀ ಕ್ಷೇತ್ರವನ್ನು ಹೇಗೆ ರಕ್ಷಿಸುತ್ತಾರೆ ಎಂಬುದನ್ನು ಮತಕ್ಷೇತ್ರದ ಮತದಾರರು ಅರಿಯಬೇಕು ಎಂದು ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಹೇಳಿದರು.

ಅವರು ಸೋಮವಾರ ರೋಣ ಪಟ್ಟಣದ ವಿ.ಎಫ್.ಪಾಟೀಲ ಹೈಸ್ಕೂಲ್ ಮೈದಾನದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಜಿ.ಎಸ್.ಪಾಟೀಲರವರ ಪರವಾಗಿ ಮತಯಾಚನೆ ಮಾಡುವ ಮೂಲಕ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಶಾಸಕ ಕಳಕಪ್ಪ ಬಂಡಿಯವರ ವರ್ತನೆಯಿಂದ ಬೇಸತ್ತು ಕುಟುಂಬದ ಸದಸ್ಯರೇ ಕಾಂಗ್ರೆಸ್ ಪಕ್ಷವನ್ನು ಸೇರಿದ್ದಾರೆ. ಅಂದರೆ ಕಳಕಪ್ಪ ಬಂಡಿ ಕ್ಷೇತ್ರದಲ್ಲಿ ಗೆಲ್ಲಲು ಸಾಧ್ಯವೇ ಎಂದು ತೀವ್ರ ವಾಗ್ದಾಳಿ ನಡೆಸಿದರು. ರಾಜ್ಯದಲ್ಲಿ ಬಿಜೆಪಿ 65 ಸ್ಥಾನಗಳನ್ನು ಮೀರುವುದಿಲ್ಲ. ಈಗಾಗಲೇ ನಡೆದ ಸಮೀಕ್ಷೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ 127 ರಿಂದ 137 ಸ್ಥಾನಗಳನ್ನು ನೀಡಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಜಗದೀಶ ಶೆಟ್ಟರ ಹಾಗೂ ನಾನು ಬಿಜೆಪಿ ಪಕ್ಷದ ಪ್ರಾಮಾಣಿಕ ಕಾರ್ಯಕರ್ತರಾಗಿ ಪಕ್ಷದ ಬೆಳವಣಿಗೆಯಲ್ಲಿ ಮುಖ್ಯಪಾತ್ರವನ್ನು ವಹಿಸಿದ್ದೇವೆ. ಆದರೆ ಬಿಜೆಪಿಯಲ್ಲಿ ಕೆಲವರಿಂದ ಹಿಡನ್ ಅಜೆಂಡಾ ರೂಪಿತವಾಗಿದ್ದು, ಈ ಹಿಡನ್ ಅಜೆಂಡಾವನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಬಿಜೆಪಿ ನಮಗೆ ಅನ್ಯಾಯ ಮಾಡಿದೆ. ಯಡಿಯೂರಪ್ಪನವರು ನಮ್ಮ ಬಗ್ಗೆ ಮಾತನಾಡುವ ನೈತಿಕತೆಯನ್ನು ಕಳೆದುಕೊಂಡಿದ್ದಾರೆ. ಅವರಿಗೂ ಬಿಜೆಪಿ ಎಲ್ಲವನ್ನೂ ನೀಡಿತ್ತು. ಹಾಗಾದರೆ ಕೆಜೆಪಿ ಪಕ್ಷವನ್ನು ಯಾಕೆ ಕಟ್ಟಿದರು ಎಂದು ಪ್ರಶ್ನಿಸಿದರು.

ಮಾಜಿ ಸಂಸದ ಆರ್.ಎಸ್.ಪಾಟೀಲ, ವಿಧಾನ ಪರಿಷತ್ತ ಸದಸ್ಯ ಶರಣಗೌಡ ಪಾಟೀಲ, ಐ.ಎಸ್.ಪಾಟೀಲ, ವಿ.ಆರ್. ಗುಡಿಸಾಗರ, ಹುಚ್ಚಪ್ಪ ನವಲಗುಂದ, ಪರಶುರಾಮ ಅಳಗವಾಡಿ, ದಶರಥ ಗಾಣಿಗೇರ, ಪ್ರಭು ಮೇಟಿ, ಅಂದಪ್ಪ ಬಿಚ್ಚೂರ, ರೂಪಾ ಅಂಗಡಿ, ಮಂಜುಳಾ ಹುಲ್ಲಣ್ಣವರ, ನಾಜಬೇಗಂ ಯಲಿಗಾರ, ಮಂಜುಳಾ ರೇವಡಿ, ವಿ.ಬಿ.ಸೋಮನಕಟ್ಟಿಮಠ ಸೇರಿದಂತೆ ಪಕ್ಷದ ಮುಖಂಡರು ಉಪಸ್ಥಿತರಿದ್ದರು.



ಬಿಜೆಪಿ ಪಕ್ಷದಲ್ಲಿದ್ದಾಗ ಉಸ್ತುವಾರಿಯಾಗಿ ಗದಗಿಗೆ ಬಂದಿದ್ದೆ. ಸಿದ್ದಣ್ಣ ಬಂಡಿ ಪರವಾಗಿ ಹೆಚ್ಚಿನ ಒತ್ತಡ ಇತ್ತು. ವಿಪರ್ಯಾಸ ಅಂದರೆ ಶಾಸಕರ ಪತ್ನಿ ಸ್ವತಹ ನನ್ನ ಗಂಡನಿಗೆ ಟಿಕೆಟ್ ಬೇಡ ನನಗೆ ಕೊಡಿ ಎಂದು ಕೇಳಿದ್ದರು. ಜಿಲ್ಲೆಗೆ ಆಗಮಿಸುವ ಮೊದಲೇ ಕ್ಷೇತ್ರಗಳ ಬಗ್ಗೆ ತಿಳಿದುಕೊಂಡಾಗ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಜಿ.ಎಸ್.ಪಾಟೀಲರ ಗೆಲುವು ಖಚಿತವಾಗಿತ್ತು.

–ಲಕ್ಷ್ಮಣ ಸವದಿ, ಮಾಜಿ ಉಪ ಮುಖ್ಯಮಂತ್ರಿಗಳು

ಬಿಜೆಪಿಯ ಚುನಾವಣಾ ಪ್ರಣಾಳಿಕೆ ಕುರಿತು ಪ್ರತಿಕ್ರಿಯೆ ನೀಡಿದ ಕಾಂಗ್ರೆಸ್ ಅಭ್ಯರ್ಥಿ ಎಚ್.ಕೆ. ಪಾಟೀಲ್

## ಬದ್ಧತೆಯಿಲ್ಲದ ಭರವಸೆಯನ್ನು ಜನತೆ ಎಂದಿಗೂ ಒಪ್ಪುವುದಿಲ್ಲ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಕಾಂಗ್ರೆಸ್ ಹಾಗೂ ಜೆಡಿಎಸ್ ಈಗಾಗಲೇ ಘೋಷಿಸಿರುವ ಅಂಶವನ್ನು ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ಹೀಗೆ ಕತ್ತರಿಸಿ, ಹಾಗೆ ಅಂಟಿಸಿದೆ. ಬಿಜೆಪಿಯ ಪ್ರಣಾಳಿಕೆಯನ್ನು ನೋಡಿದರೆ ಅವರ ದಿವಾಳಿತನ ಎದ್ದು ಕಾಣುತ್ತಿದೆ. ಭವಿಷ್ಯದ ಕರ್ನಾಟಕದ ಬಗ್ಗೆ ಸಮರ್ಪಕವಲ್ಲದ ಚಿತ್ರಣವನ್ನು ಬಿಜೆಪಿ ನೀಡಿದೆ ಎಂದು ಗದಗ ಮತಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಚ್.ಕೆ. ಪಾಟೀಲ ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿಯ ಪ್ರಣಾಳಿಕೆಯ ಕುರಿತಾಗಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಆಡಳಿತದಲ್ಲಿದ್ದಾಗ ಇವುಗಳನ್ನು ಯಾಕೆ ಜಾರಿ ಮಾಡಲಿಲ್ಲ? ಬಜೆಟ್‌ನಲ್ಲಿ ಯಾಕೆ ಘೋಷಣೆ ಮಾಡಿಲ್ಲ? ಅರ್ಧ ಲೀಟರ್ ಹಾಲು ಈಗ ನೆನಪಾಯ್ತಾ ಇವರಿಗೆ? ಎಂದು ಆಡಳಿತ ಪಕ್ಷವನ್ನು ಪ್ರಶ್ನಿಸಿದ ಪಾಟೀಲ್, ಇವರ ಉದ್ದೇಶವೇ ಇರದ ಮಾತು, ಬದ್ಧತೆಯಿಲ್ಲದ ಭರವಸೆಯನ್ನು ಕರ್ನಾಟಕದ ಜನತೆ ಎಂದಿಗೂ ಒಪ್ಪುವುದಿಲ್ಲ ಎಂದರು.

ನಿಮ್ಮ ಪ್ರಧಾನಮಂತ್ರಿಗಳು ಭರವಸೆ ನೀಡಿ, ವಚನ ಭ್ರಷ್ಟರಾಗಿಲ್ಲವೇ? ಎರಡು ಕೋಟಿ ಉದ್ಯೋಗ ಎಲ್ಲಿ ಹೋಯ್ತು, ರೈತರ ಆದಾಯ ದುಪ್ಪಟ್ಟು ಮಾಡುವ ಭರವಸೆ ಎಲ್ಲಿ ಹೋಯ್ತು? ಇವೆಲ್ಲ ಹುಸಿ ಭರವಸೆಗಳಿಂದ ನೀವು ವಚನಭ್ರಷ್ಟರು ಎಂದೇ ಮನೆಮಾತಾಗಿದ್ದೀರಿ. ಬಿಜೆಪಿಯವರು ಬಿಡುಗಡೆ ಮಾಡಿದ ಪ್ರಣಾಳಿಕೆಗೆ ▶▶3ನೇ ಪುಟಕ್ಕೆ



## 'ಸಾಮೂಹಿಕ ವಿವಾಹ: ಮೇ. 25ರ ಒಳಗೆ ಹೆಸರು ನೋಂದಾಯಿಸಿ'

■ವಿಜಯಸಾಕ್ಷಿ ಸುದ್ದಿ, ಗದಗ



ನಗರದ ಗಂಗಾಪೂರ ಪೇಟೆಯಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ಜರಗುವ ದುರ್ಗಾದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಜೂ. 12 ರಂದು ಸಾಮೂಹಿಕ ವಿವಾಹಗಳು ಜರುಗಲಿದೆ. ಈ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರು ಮೇ 25ರ ಒಳಗಾಗಿ ಹೆಸರು ನೋಂದಾಯಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೋಹನ ಇಮರಾಪೂರ ಮೊ.ಸಂ. 9845649443 ಅವರನ್ನು ಸಂಪರ್ಕಿಸಬೇಕೆಂದು ಜಾತ್ರಾ ಮಹೋತ್ಸವ ಸಮಿತಿಯ ಅಧ್ಯಕ್ಷ ಎಂ.ಎಸ್.ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಾರ್ಮಿಕ ದಿನಾಚರಣೆ ಅಂಗವಾಗಿ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಲಿಂಗರಾಜ್ ಅಗ್ರೋ ಇಂಡಸ್ಟ್ರೀಸ್, ವಿಜಯನಿಧಿ ಅಗ್ರೋ ಇಂಡಸ್ಟ್ರೀಸ್ ಹಾಗೂ ವಿಜಯನಿಧಿ ಅಗ್ರಿವೆಂಚರ್ ಇವುಗಳ ಸಹಯೋಗದಲ್ಲಿ ಕಾರ್ಮಿಕರನ್ನು ಸನ್ಮಾನಿಸುವ ಮೂಲಕ ಕಾರ್ಮಿಕರ ದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಲಿಂಗರಾಜ್ ಅಗ್ರೋ ಇಂಡಸ್ಟ್ರೀಸ್ ಮಾಲೀಕರಾದ ಶರಣಬಸಪ್ಪ ಗುಡಿಮನಿ, ಆನಂದ ಗುಡಿಮನಿ ಮತ್ತು ಸಹೋದರರು ಹಿರಿಯ ಕಾರ್ಮಿಕರಾದ ಮಲ್ಲಪ್ಪ ಕರ್ಣಿ, ಸಂಗಪ್ಪ ಬೇವೂರ, ಹುಸೇನಸಾಬ್ ನದಾಫ್, ಶಿವಪ್ಪ ಕಂಬಳಿ, ಚೇತನ ಮಡಿವಾಳರ, ದೇವಪ್ಪ ಕರ್ಣಿ, ನಾರಾಯಣ ಬಂಡಿ, ಮಲ್ಲಪ್ಪ ಬಾರಕೇರ, ವೀರೇಶ ಅಂಗಡಿ, ದಾವಲ್ ನಿಡಗಿ, ಮುತ್ತಪ್ಪ ಪೂಜಾರಿ, ಮಂಜುನಾಥ ಪಾಟೀಲ, ಮುತ್ತಪ್ಪ ಗೊನೆಮ್ಮನವರ, ಸಂತೋಷ ಗುಡಿಮನಿ, ರಾಮು ಕಾಯಗಡ್ಡಿ, ಮಹೇಶ ಪಾಟೀಲ, ಆಕಾಶ ಕಲ್ಯಾಣಿ, ಶ್ರೀಕಾಂತ ಗುಡಿ, ಶಶಾಂಕ ಅರಮನಿ, ರಮೇಶ ಕರ್ಣಿ, ಬಸವರಾಜ ಅಂಗಡಿ, ಸಿದ್ದಪ್ಪ ಬಂಡಿವಾಡ, ಸಂಗಪ್ಪ ಲಿಂಗದಾಳ, ಚಂಬಣ್ಣ ನಾವಳ್ಳಿ, ಶೋಭಾ, ರಜಿಯಾಬೇಗಂ, ನೀಲಮ್ಮ ಬೇವೂರ ಅವರನ್ನು ಸನ್ಮಾನಿಸಲಾಯಿತು.

ನೇಕಾರ ಕಾರ್ಮಿಕರ ಬೆಂಬಲಾರ್ಥ ಸಭೆಯಲ್ಲಿ ಅನಿಲ ಮೆಣಸಿನಕಾಯಿ ಮತಯಾಚನೆ

## ಗದಗ ಕ್ಷೇತ್ರವನ್ನು ಪ್ರಗತಿಯತ್ತ ಕೊಂಡೊಯ್ಯಲು ಈ ಬಾರಿ ನನಗೆ ಶಕ್ತಿ ನೀಡಿ



■ವಿಜಯಸಾಕ್ಷಿ ಸುದ್ದಿ, ಬೆಟಗೇರಿ

ನೇಕಾರಿಕೆಯಲ್ಲಿ ಐತಿಹಾಸಿಕ ಮಾನ್ಯತೆಯನ್ನು ಪಡೆದ ಬೆಟಗೇರಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆಯ ಬಗ್ಗೆ ರಾಜ್ಯ ಸರಕಾರದ ಗಮನ ಸೆಳೆಯಲಾಗುವದು. ನೇಕಾರಿಕೆಯನ್ನು ನಂಬಿದ ಜವಳಿ ಉತ್ಪಾದಕರಿಗೆ ಮತ್ತು ನೇಕಾರ ಕಾರ್ಮಿಕರ ಬಲ ವರ್ಧನೆಗಾಗಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಗದಗ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅನಿಲ ಮೆಣಸಿನಕಾಯಿ ಹೇಳಿದರು.

ಇಲ್ಲಿನ ಶಿವರತ್ನ ಪ್ಯಾಲೇಸ್‌ನಲ್ಲಿ ಗದಗ ಬಿಜೆಪಿ ಅಭ್ಯರ್ಥಿ ಅನಿಲ ಮೆಣಸಿನಕಾಯಿ ಪರವಾಗಿ ನಡೆದ ನೇಕಾರ ಕಾರ್ಮಿಕರ ಬೆಂಬಲಾರ್ಥ ಸಭೆಯಲ್ಲಿ ಅವರು ಮತಯಾಚಿಸಿ ಮಾತನಾಡಿದರು.

ಅಸಂಖ್ಯಾತ ಕುಟುಂಬಗಳು ನೇಕಾರಿಕೆಯನ್ನೇ ಅವಲಂಬಿಸಿವೆ.. ಅವರ ಉಜ್ವಲ ಭವಿಷ್ಯಕ್ಕಾಗಿ ಬೆಟಗೇರಿಯಲ್ಲಿ ಜವಳಿ ಪಾರ್ಕ್ ಸ್ಥಾಪಿಸಿ, ಅವರಲ್ಲಿ ಆರ್ಥಿಕ ಶಕ್ತಿ ತುಂಬಿ, ಮುಖ್ಯವಾಹಿನಿಗೆ ತರಲಾಗುವದು. ಗದುಗಿನ ಜನತೆ ಸ್ವಾಭಿಮಾನಿಗಳಾಗಿದ್ದಾರೆ, ಪ್ರಬುದ್ಧರಿದ್ದಾರೆ. ಗದಗ ಕ್ಷೇತ್ರವನ್ನು ಪ್ರಗತಿಯತ್ತ ಕೊಂಡೊಯ್ಯಲು ಈ ಬಾರಿ ನನಗೆ ಶಕ್ತಿ ನೀಡಿ ಬೆಂಬಲಿಸಿ ಎಂದು ವಿನಂತಿಸಿದರು.

ಗದಗ – ▶▶3ನೇ ಪುಟಕ್ಕೆ

ಕಾರ್ಮಿಕರ ದಿನಾಚರಣೆ : ನ್ಯಾಯಾಧೀಶ ಗುರುಪ್ರಸಾದ ಅಭಿಮತ

## 'ಅಸಂಘಟಿತ ಕಾರ್ಮಿಕರು ಸಂಘಟಿತರಾಗಿ ಸೌಲಭ್ಯ ಪಡೆಯಬೇಕು'

■ವಿಜಯಸಾಕ್ಷಿ ಸುದ್ದಿ, ಗದಗ



ಅಸಂಘಟಿತ ಕಾರ್ಮಿಕರು ಸಂಘಟಿತರಾಗಬೇಕು, ಕಾರ್ಮಿಕ ನೋಂದಣಿಯನ್ನು ಕಡ್ಡಾಯವಾಗಿ ಮಾಡಿಸುವ ಮೂಲಕ ಸರಕಾರದಿಂದ ಲಭ್ಯವಿರುವ ಸೌಲಭ್ಯಗಳನ್ನು ಪಡೆದುಕೊಂಡು ತಮ್ಮ ಜೀವನದ ಮಟ್ಟವನ್ನು ಸುಧಾರಿಸಿಕೊಳ್ಳಬೇಕೆಂದು ಹಿರಿಯ ದಿವಾಣಿ ನ್ಯಾಯಾಧೀಶರೂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳೂ ಆದ ಕೆ.ಗುರುಪ್ರಸಾದ ಅಭಿಪ್ರಾಯಪಟ್ಟರು.

ಗದಗ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಗದಗ ಜಿಲ್ಲಾ ವಕೀಲರ ಸಂಘ, ಉತ್ತರ ಕರ್ನಾಟಕ ಕಟ್ಟಡ ನಿರ್ಮಾಣ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘ, ಗದಗ ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಮಿಕರ ಸಂಘದ ಕಾರ್ಯಾಲಯದಲ್ಲಿ ಸೋಮವಾರ ಏರ್ಪಡಿಸಿದ್ದ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಆಡಳಿತ ವರ್ಗ ಮತ್ತು ಕಾರ್ಮಿಕ ವರ್ಗ ಸಮನ್ವಯತೆಯಿಂದ ಮುನ್ನಡೆಯಬೇಕು, ಏರುಪೇರು ಆದಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳುವವು. ಸಂಘಟಿತ ಕಾರ್ಮಿಕರಿಗೆ ಅನೇಕ ಕಾನೂನುಗಳು ಅನ್ವಯವಾಗುತ್ತವೆ. ಈ ಕಾನೂನಿನ ಅಡಿಯಲ್ಲಿ ನೋಂದಣಿ ಮಾಡಿಕೊಂಡವರಿಗೆ ಕಾರ್ಮಿಕ ಕಲ್ಯಾಣ ನಿಧಿಯಿಂದ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯವಿದೆ ಎಂದರು.

ವಿಚಾರ ಪ್ರಖ್ಯ ▶▶3ನೇ ಪುಟಕ್ಕೆ

## ಜ.ಫಕೀರೇಶ್ವರ ಮಠಕ್ಕೆ ಒಂಟೆಗಳನ್ನು ಸಮರ್ಪಿಸಿದ ಟಿ.ಈಶ್ವರ ದಂಪತಿ



■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಶಿರಹಟ್ಟಿಯ ಶ್ರೀ ಜ.ಫಕೀರೇಶ್ವರ ಮಠದ 13ನೇ ಪೀಠಾಧ್ಯಕ್ಷರಾದ ಜ.ಫ.ಸಿದ್ದರಾಮ ಸ್ವಾಮೀಜಿ ಅವರ ಅಪೇಕ್ಷೆಯ ಮೇರೆಗೆ ಸೋಮವಾರ ಸ್ಕೂಲ್ ಚಂದನ ಸಂಸ್ಥಾಪಕ ಟಿ.ಈಶ್ವರ ದಂಪತಿ ಎರಡು ಒಂಟೆಗಳನ್ನು ದಾನವಾಗಿ ಉಭಯ ಶ್ರೀಗಳ ನೇತೃತ್ವದಲ್ಲಿ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಚಂದನ ಶಿಕ್ಷಣ ಸಂಸ್ಥೆಯ ಟಿ.ಈಶ್ವರ, ಒಂದು ಗಂಡು ಮತ್ತು ಒಂದು ಹೆಣ್ಣು ಒಂಟೆಯನ್ನು ಗುಜರಾತ್‌ನಿಂದ ತರಿಸಿ ಸಂಸ್ಥೆಯ ವಿದ್ಯಾರ್ಥಿಗಳಿಂದ ಪೂಜೆಯ ವಿಧಾನಗಳನ್ನು ನಡೆಸಿ ತದನಂತರ ಲಕ್ಷ್ಮೇಶ್ವರದ ಐತಿಹಾಸಿಕ ಶ್ರೀ ಸೋಮೇಶ್ವರ ದೇವಸ್ಥಾನ ಮತ್ತು ದೂದ್ ನಾನಾ ದರ್ಗಾದಲ್ಲಿ ವಿಶೇಷ ಪೂಜೆ ಸಲ್ಲಿಸಿ ಉಭಯ ಶ್ರೀಗಳ ನೇತೃತ್ವದಲ್ಲಿ ಎರಡೂ ಒಂಟೆಗಳನ್ನು ದಾನವಾಗಿ ಶ್ರೀಮಠಕ್ಕೆ ಸಮರ್ಪಿಸಲಾಗಿದೆ. ಶ್ರೀಮಠದ ಭಾವೈಕ್ಯತೆಯ ಸಂದೇಶ ಅತ್ಯಂತ ಆಶಾಕಿರಣವಾಗಿದೆ. ಶ್ರೀಗಳ ಅಪ್ಪಣೆ ಮೇರೆಗೆ ಒಂಟೆಗಳನ್ನು ಕಾಣಿಕೆಯಾಗಿ ನಮ್ಮ ಕುಟುಂಬ ಕೊಡಲು ಮಾಡಿರುವುದು ನನಗೆ ಸಿಕ್ಕ ಅವಕಾಶ ಮಹಾಪ್ರಸಾದವೆಂದು ಭಾವಿಸುತ್ತೇನೆ ಎಂದರು.

ಜ.ಫ.ದಿಂಗಾಲೇಶ್ವರ ಸ್ವಾಮೀಜಿ ಮಾತನಾಡಿ, ಟಿ.ಈಶ್ವರ ಕುಟುಂಬ ಶ್ರೀಮಠದೊಂದಿಗೆ ಅನನ್ಯವಾದ ಸಂಬಂಧ ಇದೆ, ಈ ಕುಟುಂಬಕ್ಕೆ ಮತ್ತು ಸಂಸ್ಥೆಗೆ ಕರ್ತೃ ಶ್ರೀ ಫಕೀರೇಶ್ವರರ ಆಶೀರ್ವಾದ ಸದಾ ಇರಲಿ ಎಂದು ಹಾರೈಸಿದರು.

ಇದಕ್ಕೂ ಮೊದಲು ಹರಿಪೂರ ಗ್ರಾಮದಿಂದ ಶಿರಹಟ್ಟಿ ಪಟ್ಟಣದವರೆಗೆ ಭವ್ಯ ಮೆರವಣಿಗೆ ಮೂಲಕ ಶ್ರೀಮಠಕ್ಕೆ ಒಂಟೆಗಳನ್ನು ಕರೆತರಲಾಯಿತು.

ಶಿವಪ್ರಕಾಶ ಮಹಾಜನಶೆಟ್ಟರ, ಸಿ.ಸಿ.ನೂರಶೆಟ್ಟರ, ಗಿರಿಜಾ ಟಿ.ಈಶ್ವರ, ಶಂಕ್ರಣ್ಣ ಕಾಳಗಿ, ಡಾ: ಎಸ್. ಎಂ.ಬುರಬರೆ, ಆರ್.ಬಿ.ಕಮತ, ಚಂದ್ರು ತಳವಾರ, ಆಸೀಫ್ ಆದ್ರಳ್ಳಿ, ಬಕ್ಸಿ ಮುಳಗುಂದ, ಚಾಂದಸಾಬ ಮುಳಗುಂದ, ಜಗದೀಶ ಇಟ್ಟೇಕಾರ, ಮಹಾಂತೇಶ ದಶಮನಿ ಮುಂತಾದವರು ಉಪಸ್ಥಿತರಿದ್ದರು.

## ಸಾಕ್ಷಿ ಸುಭಾಷಿತ

**ಒಳ್ಳೆಯ ಆರಂಭ ಎಂದರೆ ಕೆಲಸ ಅರ್ಧ ಮುಗಿದಂತೆಯೇ**

**–ಅರಿಸ್ಟಾಟಲ್**

## ಸಂಪಾದಕೀಯ

### ಎಲ್ಲರಿಗೂ ಸೋಲುವ ಭೀತಿಯೇ?

ಕರ್ನಾಟಕ ವಿಧಾನಸಭಾ ಚುನಾವಣೆ ಮತದಾನಕ್ಕೆ ದಿನಗಣನೆ ಆರಂಭವಾಗಿದೆ. ರಾಷ್ಟ್ರೀಯ ಪಕ್ಷಗಳು, ಪ್ರಾದೇಶಿಕ ಪಕ್ಷಗಳು ಮತ್ತು ಪಕ್ಷೇತರ ಅಭ್ಯರ್ಥಿಗಳು ಬಿರುಸಿನ ಪ್ರಚಾರ ನಡೆಸಿದ್ದಾರೆ.

ಅದರಲ್ಲೂ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷ ತಮ್ಮ ರಾಷ್ಟ್ರೀಯ ನಾಯಕರನ್ನ ಕರೆತಂದು ಪ್ರಚಾರ ನಡೆಸುತ್ತಿದ್ದಾರೆ. ಎರಡು ಪಕ್ಷಗಳಲ್ಲೂ ಸ್ಟಾರ್ ಪ್ರಚಾರಕರ ದೊಡ್ಡಪಟ್ಟಿಯೇ ಇದೆ. ಅದರ ಜೊತೆಗೆ ಸಿನಿಮಾ ನಟ ನಟಿಯರು ಕೂಡ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದಾರೆ.

ಕಾಂಗ್ರೆಸ್ ಮತ್ತು ಬಿಜೆಪಿಯ ಸ್ಟಾರ್ ಪ್ರಚಾರಕರ ಪಟ್ಟಿಯನ್ನು ನೋಡುವುದಾದರೆ, ಅದರಲ್ಲಿರುವ ರಾಷ್ಟ್ರೀಯ ನಾಯಕರು ಮತ್ತು ಸಂಸದರು ಮಾತ್ರ ಬೇರೆ ಬೇರೆ ಕ್ಷೇತ್ರಗಳಲ್ಲಿ ಚುನಾವಣೆ ಪ್ರಚಾರ ನಡೆಸುತ್ತಿದ್ದಾರೆ. ಆದರೆ ಯಾವುದೇ ಒಬ್ಬ ಪ್ರಭಾವಿ ಅಭ್ಯರ್ಥಿ ತನ್ನ ಪಕ್ಷದ ಕ್ಷೇತ್ರಕ್ಕೆ ಹೋಗಿ ಪ್ರಚಾರ ನಡೆಸುತ್ತಿಲ್ಲ. ಪ್ರಭಾವಿ ನಾಯಕರು, ಸೋಲಿಲ್ಲದ ಸರದಾರರು ಎಂದಲ್ಲ ಬಿರುದು ಪಡೆದುಕೊಂಡಿರುವ ನಾಯಕರು ಸಹ ತಮ್ಮ ಸ್ವಕ್ಷೇತ್ರ ಬಿಟ್ಟು ಕದಲುತ್ತಿಲ್ಲ. ಗೆಲುವು ನಿಶ್ಚಿತ ಎನ್ನುವ ವಿಶ್ವಾಸವಿದ್ದರೂ ಕೆಲ ಪ್ರಭಾವಿ ನಾಯಕರು ತಮ್ಮ ಸುಕ್ಷೇತ್ರ ಬಿಟ್ಟು ಪಕ್ಷದ ಕ್ಷೇತ್ರಕ್ಕೆ ಕಾಲಿಡುತ್ತಿಲ್ಲ. ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಸಹಿತ ರಾಜ್ಯ ಬಿಜೆಪಿ ಸರ್ಕಾರದ ಅನೇಕ ಮಂತ್ರಿಗಳು ತಮ್ಮ ಸ್ವಕ್ಷೇತ್ರದಲ್ಲೇ ಠಿಕಾಣಿ ಹೂಡಿದ್ದಾರೆ. ಇನ್ನು ಕಾಂಗ್ರೆಸ್ ಪಕ್ಷದಲ್ಲಿ ಪ್ರಚಾರ ಸಮಿತಿ ಅಧ್ಯಕ್ಷರಾಗಿರುವ ಎಂ ಬಿ ಪಾಟೀಲ್ ಸಹ ಬೇರೆ ಕ್ಷೇತ್ರದಲ್ಲಿ ಪ್ರಚಾರ ನಡೆಸುತ್ತಿಲ್ಲ. ಬಬಲೇಶ್ವರ ಕ್ಷೇತ್ರದ ಅಕ್ಕಪಕ್ಕದ ಬೆರಳಣಿಕೆಯ ಕ್ಷೇತ್ರಕ್ಕೆ ಭೇಟಿ ನೀಡಿದ್ದು ಬಿಟ್ಟರೆ ರಾಜ್ಯಾದ್ಯಂತ ಸಂಚರಿಸುತ್ತಿಲ್ಲ. ಇನ್ನು ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಕಾಂಗ್ರೆಸ್ಸಿನ ಅನೇಕ ಪ್ರಭಾವಿ ನಾಯಕರು ತಮ್ಮ ಕ್ಷೇತ್ರದತ್ತಲೆ ದೃಷ್ಟಿ ನೆಟ್ಟಿದ್ದಾರೆ. ಪ್ರತಿಯೊಬ್ಬರಿಗೂ ತಮ್ಮ ಗೆಲುವು ಮುಖ್ಯ. ಆ ಕಾರಣಕ್ಕಾಗಿ ಕ್ಷೇತ್ರದಲ್ಲಿ ಓಡಾಡಿ ಮತ ಗಳಿಕೆ ಮಾಡುವುದು ಅಷ್ಟೇ ಸಾಮಾನ್ಯ. ಆದರೆ 2023ರ ವಿಧಾನಸಭೆ ಚುನಾವಣೆ ಒಂದಷ್ಟು ವಿಭಿನ್ನವಾಗಿದೆ. ಆಡಳಿತ ಪಕ್ಷಕ್ಕೆ ಮತ್ತೊಮ್ಮೆ ಗದ್ದುಗೆ ಏರುವ ಕನಸು, ಪ್ರತಿಪಕ್ಷಕ್ಕೆ ಅಧಿಕಾರ ಹಿಡಿಯಬೇಕೆನ್ನುವ ಹಠ. ಹೀಗಾಗಿ ಎರಡು ಪಕ್ಷದ ಅಭ್ಯರ್ಥಿಗಳಿಗೆ ಸೋಲಿನ ಭಯ ಎದುರಾಗಿದೆ. ಹೀಗಾಗಿ ತಮ್ಮ ಸ್ವಕ್ಷೇತ್ರ ಬಿಟ್ಟು ಕದಲುತ್ತಿಲ್ಲ. ಭಯ ವ್ಯಕ್ತಿಯ ಚಲನಶೀಲತೆಗೆ ತೊಡಕಾಗುತ್ತದೆ ಎನ್ನುವುದು ಈ ಚುನಾವಣೆಯಿಂದ ಸಾಬೀತಾಗಿದೆ.



ಇತ್ತೀಚೆಗೆ ಗದಗ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅನಿಲ ಮೆಣಸಿನಕಾಯಿ ಅವರ ನಿವಾಸಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಪಂಚಮಸಾಲಿ ಸಮುದಾಯದ ಯುವ ಮುಖಂಡರು ಕಿತ್ತೂರು ಚೆನ್ನಮ್ಮರ ಭಾವಚಿತ್ರ ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ವಸಂತ ಪಡಗದ, ಅಯ್ಯಪ್ಪ ಅಂಗಡಿ ಸೇರಿದಂತೆ ಅನೇಕ ಮುಖಂಡರು ಹಾಜರಿದ್ದರು.



ಗದಗ ಜಿಲ್ಲಾ 4 ವೀಲರ್ ಮೆಕ್ಯಾನಿಕಲ್ ಹಾಗೂ ಬಾಡಿ ವರ್ಕ್ಸ್ ಅಸೋಸಿಯೇಶನ್ ಸಂಘದ ವತಿಯಿಂದ ಸೋಮವಾರ ಕಾರ್ಮಿಕ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಉಸ್ಮಾನ್ ಮಾಳೆಕೂಪ್ಪ, ಉಪಾಧ್ಯಕ್ಷ ನಿಂಗಪ್ಪ ಎಂಬತನಾಳ, ಖಾಜಿ ಮೇಸ್ತ್ರ, ಆನಂದ ಮೇಸ್ತ್ರಿ, ಮೈನೂ ಮೇಸ್ತ್ರಿ, ಅಲಿ ಮೇಸ್ತ್ರಿ, ಮಹಮ್ಮದಅಲಿ ಮೇಸ್ತ್ರಿ, ಇಸ್ಮಾಯಿಲ್ ಜಹೀರ್‌ಬಾಷ ತರೀನ, ಎಲ್ಲಪ್ಪ, ಜಾಪರ ಮಹಮ್ಮದಲಿ ಮೇಸ್ತ್ರಿ, ಚಾಂದ ಮೇಸ್ತ್ರಿ, ಲಕ್ಷಣ, ಶಿವು, ಶೀನು ಹಿರಿಯರಾದ ದಾದು ಮೇಸ್ತ್ರಿ, ದಾವಲ ಮೇಸ್ತ್ರಿ, ಶಬ್ಬಿರ ಮೇಸ್ತ್ರಿ ಉಪಸ್ಥಿತರಿದ್ದರು.

**ಕ್ಷಣಕಾಲ ಇರುವ ನೋಟಿಗೆ ನಿಮ್ಮ ವೋಟನ್ನು ಮಾರಿಕೊಳ್ಳಬೇಡಿ**

# ಮತದಾನ ನಮ್ಮ ಹಕ್ಕು, ಅರಿತು ಚಲಾಯಿಸಿ

ಭಾರತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸಾರುವ ದೇಶ. ಬ್ರಿಟಿಷ್ ಆಳ್ವಿಕೆಯಿಂದ 1947ರಲ್ಲಿ ಸ್ವಾತಂತ್ರ್ಯಗೊಂಡ ನಂತರ ದೇಶ ಪ್ರಜಾಪ್ರಭುತ್ವದ ಮೊರೆ ಹೋಯಿತು. ನಾಗರಿಕರು ತಮ್ಮ ನಾಯಕರನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಪಡೆದರು. ಪ್ರಜೆಗಳು ತಮ್ಮ ಅಮೂಲ್ಯವಾದ ಮತದಾನವನ್ನು ಚಲಾಯಿಸುವ ಮೂಲಕ ಮತದಾನಕ್ಕಿರುವ ಅರ್ಥ ಹಾಗೂ ಮಹತ್ವವನ್ನು ಸೂಕ್ತವಾಗಿ ಪರಿಚಯಿಸಿದರು.

ಪ್ರತಿ 5 ವರ್ಷಗಳಿಗೊಮ್ಮೆ ನಡೆಯುವ ಚುನಾವಣೆ, ಮುಂದಿನ 5 ವರ್ಷಗಳಿಗೆ ದೇಶದ ಹಿತವನ್ನು ಕಾಪಾಡುವ ನಿಟ್ಟಿನಲ್ಲಿ ನಡೆಯುವಂತಹ ಪ್ರಕ್ರಿಯೆಯಾಗಿದೆ. ಇದೊಂದು ಔಪಚಾರಿಕ ವ್ಯವಸ್ಥೆಯಾಗಿದ್ದು, ನಿರ್ಧಾರ ಮಾಡುವ ಪ್ರಕ್ರಿಯೆ ಜನಸಮುದಾಯದ ಮೇಲಿರುತ್ತದೆ.

ಆದರೆ ಪ್ರಸ್ತುತ ಚುನಾವಣಾ ವ್ಯವಸ್ಥೆ ಕ್ರಮಬದ್ಧ ಚುನಾವಣಾ ವ್ಯವಸ್ಥೆಯಾಗಿ ಸುಧಾರಿಸುವ ಅವಶ್ಯಕತೆ ತುಂಬಾ ಇದೆ. ಭಾರತದಲ್ಲಿ ಚುನಾವಣೆಗಳು ಸುದೀರ್ಘವಾದ ದಾರಿಯನ್ನು ದಾಟಿವೆಯಾದರೂ, ಮತದಾರರಿಗೆ ಆಮಿಷವೊಡ್ಡುವ ಹಾದಿಯನ್ನು ಇನ್ನೂ ಸಹ ಕೈಬಿಟ್ಟಿಲ್ಲ. ಬಹುಶಃ ಇದಕ್ಕೆ ಎರಡು ಕೈ ಸೇರಿದರೆ ಹೇಗೆ ಚಪ್ಪಾಳೆಯೋ ಹಾಗೆ, ಆಮಿಷವೊಡ್ಡುವ ವ್ಯಕ್ತಿಯು ಹುಟ್ಟಿಕೊಳ್ಳುವುದೇ ಆಮಿಷಕ್ಕೆ ಒಳಗಾಗುವ ವ್ಯಕ್ತಿಗಳಿಂದ ಅಂದರೆ ತಪ್ಪಾಗದು.



ಮತದಾನ ನಮ್ಮ ಹಕ್ಕು. ಅದನ್ನು ಮಾರಿಕೊಳ್ಳುವುದು ಎಷ್ಟು ಸರಿ? ಕ್ಷಣಿಕವಾಗಿ ಸಿಗುವ ಆಸೆ– ಆಮಿಷಗಳಿಗೆ ತಲೆಕೊಟ್ಟು, ಮತವನ್ನು ಚಲಾಯಿಸಿ ಮುಂದೆ ತಲೆಯೇ ಇಲ್ಲದಂತ ಸರ್ಕಾರ ರಚನೆಯಾಗುವಲ್ಲಿ ನಾವೇ ನೇರವಾಗಿ ಕಾರಣವಾಗುವುದರಲ್ಲಿ ಅನುಮಾನವೇ ಇಲ್ಲ.

18 ವರ್ಷ ವಯೋಮಿತಿಯನ್ನು ದಾಟಿ–ದ ಪ್ರತಿಯೊಬ್ಬರೂ ಮತವನ್ನು ಚಲಾಯಿಸಲು ಅರ್ಹರೆಂದು ತಿಳಿಸಿರುವ ಉದ್ದೇಶವೇ, ಅವರಲ್ಲೂ ಪ್ರೌಢತೆ, ನಿರ್ಧಾರ ತೆಗೆದುಕೊಳ್ಳುವ ಗಟ್ಟಿತನ, ಯೋಚಿಸುವ ಸಾಮರ್ಥ್ಯ ಇರುತ್ತದೆ ಎಂಬುವಂತಹ ನಂಬಿಕೆಯಿಂದಲೇ. ಹಾಗಿರುವಾಗ 18 ವರ್ಷ ಮೀರಿದವರು ತಮ್ಮ ಮತವನ್ನು ಚಲಾಯಿಸಲು ಬೇರೆಯವರ ಮಾತುಗಳನ್ನು ಏಕೆ ಕೇಳಬೇಕು?

ಹಣದ ಮೂಲಕವೋ ಅಥವಾ ವಸ್ತುವಿನ ಮೂಲಕವೋ ನಾಗರಿಕರ ಮತವನ್ನು ಕೊಂಡುಕೊಳ್ಳುವಲ್ಲಿ ಮುಂದಾಗುವ ಭ್ರಷ್ಟ ಸರ್ಕಾರ ಮುಂದೆ ದೇಶದಲ್ಲಿ ಭ್ರಷ್ಟಾಚಾರದಂತ ವ್ಯವಸ್ಥೆಗಳನ್ನು ತೊಡೆದುಹಾಕುತ್ತದೆ ಎನ್ನುವುದು ಊಹೆಗೂ ನಿಲುಕದ ವಿಷಯ.

ದೇಶದ ಭವಿಷ್ಯ ಹಾಗೂ ನೆಮ್ಮದಿಯ ಜೀವನ ಉಜ್ವಲಗೊಳ್ಳಲು ಸಂಯಮದಿಂದ ಯೋಚಿಸಿ, ಗಮನಾರ್ಹವಾದ ನಿರ್ಧಾರದ ಮೂಲಕ ಹೊಸ ಸರ್ಕಾರದ ರಚನೆಗೆ ಅಡಿಪಾಯವಾಗಬೇಕಾಗಿರುವುದು ಎಲ್ಲ ಮತದಾರರ ಆದ್ಯ ಹಕ್ಕು ಹಾಗೂ ಕರ್ತವ್ಯವೇ ಆಗಿದೆ.



**–ತೇಜಶ್ವಿನಿ ಅ.ಹೊಂಬಳ.**
ವಕೀಲರು,ಹುಬ್ಬಳ್ಳಿ.

## ಡಾ.ಚಂದ್ರು ಲಮಾಣಿ ಪರ ಪತ್ನಿ ಮತಯಾಚನೆ

■ **ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಬಿಜೆಪಿ ಪಕ್ಷದ ಶಿರಹಟ್ಟಿ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಚಂದ್ರು ಲಮಾಣಿ ಪರ ಅವರ ಪತ್ನಿ ಸರೋಜಾ ಲಮಾಣಿ ಕ್ಷೇತ್ರದಾದ್ಯಂತ ಕರಪತ್ರ ಹಿಡಿದು ಮನೆ ಮನೆಗೆ ಬೇಟಿ ನೀಡಿ ಮತಯಾಚನೆ ಮಾಡುತ್ತಿದ್ದಾರೆ.



ಈ ಕುರಿತು ಮಾತನಾಡಿದ ಅವರು ಪತಿ ಡಾ. ಚಂದ್ರು ಲಮಾಣಿ ಅವರಿಗೆ ಜನಸೇವೆ ಮಾಡುವ ಮಹದೋದ್ದೇಶವಿದೆ. ಅದಕ್ಕಾಗಿ ಅವರು ತಮ್ಮ ವೈದ್ಯ ವೃತ್ತಿಯುದ್ದಕ್ಕೂ ಅನೇಕ ಉಚಿತ ಆರೋಗ್ಯ ಶಿಬಿರಗಳು, ಕೋವಿಡ್ ಕಾಲದಲ್ಲಿ ಅಸಹಾಯಕರು, ಬಡವರು, ನಿರ್ಗತಿಕರು, ಗುಡಿಸಲು ವಾಸಿಗಳಿಗೆ ಸಿದ್ದಪಡಿಸಿದ ಆಹಾರ ಪೊಟ್ಟಣ, ಆರೋಗ್ಯ ಸೇವೆ, ಸಾರಿಗೆ ಸೇರಿ ಅನೇಕ ಸೇವೆ, ದಾನ–ಧರ್ಮದ ಕಾರ್ಯಗಳನ್ನು ಮಾಡಿದ್ದಾರೆ. ಸಸಿ ನೆಡುವ ಕಾರ್ಯ, ಬಡ ಮಕ್ಕಳಿಗೆ ಶಿಕ್ಷಣ ಸೇವೆ, ಸ್ವಚ್ಛತೆ ಹೀಗೆ ಅನೇಕ ಸಮಾಜ ಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕ್ಷೇತ್ರದ ಅಭಿವೃದ್ಧಿಯ ಕನಸು ಹೊತ್ತು ನಿಸ್ವಾರ್ಥ ಸೇವೆಗೆ ಸಜ್ಜಾಗಿರುವ ಅವರಿಗೆ ಪಕ್ಷ ಅವಕಾಶ ನೀಡಿದೆ. ರಾಜಕಾರಣ ಅವರಿಗೆ ಹೊಸತು. ಆದರೆ ಅವರ ಸೇವಾ ಮನೋಭಾವ ಪರಿಗಣಿಸಿ ಅವರ ಗೆಲುವಿಗಾಗಿ ಹಿರಿಯರು, ಮಹಿಳೆಯರು, ಯುವಕರ ಪಡೆ ಸನ್ನದ್ಧವಾಗಿದೆ. ರಾಜಕಾರಣ ಏನೆಂದು ಅರಿಯದ ನಾನೂ ನನ್ನ ಪುಟ್ಟ ಮಗುವನ್ನು ಮನೆಯಲ್ಲಿ ಹಿರಿಯರೊಂದಿಗೆ ಬಿಟ್ಟು ಪತಿಯ ಗೆಲುವಿಗೆ ಮತಯಾಚನೆ ಮಾಡುತ್ತಿದ್ದೇನೆ ಎಂದರು.

## 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ತಪ್ಪದೇ ಮಾತದಾನ ಮಾಡಿ: ಪ್ರಶಾಂತ ಜೆ.ಸಿ.



■ **ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಶಿರಹಟ್ಟಿ ವಿಧಾನಸಭೆ ವ್ಯಾಪ್ತಿಯಲ್ಲಿ ಈ ಬಾರಿ ಮತದಾನದ ಪ್ರಮಾಣವು ಶೇ.100ರಷ್ಟಾಗಲು ಪ್ರತಿಯೊಬ್ಬರೂ ಸಹಕರಿಸಬೇಕು. ಮಹತ್ವದ ಮತದಾನ ಕಾರ್ಯದಲ್ಲಿ ಪ್ರತಿಯೊಬ್ಬರೂ ಭಾಗಿಯಾಗಬೇಕು ಎಂದು ಜಿ.ಪಂ. ಮುಖ್ಯ ಲೆಕ್ಕಾಧಿಕಾರಿ ಪ್ರಶಾಂತ ಜೆ.ಸಿ. ತಿಳಿಸಿದರು. ಜಿಲ್ಲಾ ಮತ್ತು ತಾಲೂಕು ಸ್ವೀಪ್ ಸಮಿತಿ ಸಹಯೋಗದಲ್ಲಿ ಪಟ್ಟಣದಲ್ಲಿ ಶನಿವಾರ ಹಮ್ಮಿಕೊಂಡ ಬೃಹತ್ ಮತದಾನ ಜಾಗೃತಿ ಬೈಕ್ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಮೇ.10ರಂದು ಜಿಲ್ಲೆಯ 956 ಮತಗಟ್ಟೆಗಳಲ್ಲಿ ಮತದಾನ ನಡೆಯಲಿದೆ. 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ತಪ್ಪದೇ ಮಾತದಾನ ಮಾಡಬೇಕು. ಪ್ರತಿಯೊಬ್ಬರೂ ಮತದಾನ ಕೇಂದ್ರಕ್ಕೆ ತೆರಳಿ ಮತ ಚಲಾಯಿಸಲು ಪ್ರೇರಣೆ ನೀಡಬೇಕು ಎಂದು ತಿಳಿಸಿದರು.

ಜಿ.ಪಂ. ಸಹಾಯಕ ಕಾರ್ಯದರ್ಶಿ ಎಸ್.ಎಸ್. ಕಲ್ಮನಿ ಮಾತನಾಡಿ, ವಿಶ್ವದಲ್ಲಿಯೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವುಳ್ಳ ದೇಶ ಭಾರತ. ಪ್ರಜಾಪ್ರಭುತ್ವದಲ್ಲಿ ಮತದಾರನೇ ನಿಜವಾದ ಪ್ರಭು. ಪ್ರಜಾಪ್ರಭುತ್ವ ಜೀವಂತವಾಗಿ ಉಳಿಯಬೇಕೆಂದರೆ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು. ಮತದಾನ ನಮಗೆ ಸಂವಿಧಾನಾತ್ಮಕವಾಗಿ ದೊರೆತಿರುವ ಹಕ್ಕು. ಧರ್ಮ, ಜನಾಂಗ, ಜಾತಿ, ಮತ, ಭಾಷೆ ಅಥವಾ ಯಾವುದೇ ಪ್ರೇರೇಪಣೆಗಳ ದಾಕ್ಷಿಣ್ಯಗಳಿಗೆ ಪ್ರಭಾವಿತರಾಗದೇ ಮತ ಚಲಾಯಿಸಿ ಎಂದರು. ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಎಂ.ವಿ. ಬಡಿಗೇರ, ಸಹಾಯಕ ನಿರ್ದೇಶಕ (ಗ್ರಾಉ) ಕೃಷ್ಣ ಧರ್ಮರ, ಚುನಾವಣಾಧಿಕಾರಿ, ಪುರಸಭೆ ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ, ತಾಲೂಕು ಪಂಚಾಯತಿ ಸಿಬ್ಬಂದಿಗಳು, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳು, ಪುರಸಭೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಇದ್ದರು. ಸ್ವೀಪ್ ಸಮಿತಿ ನೇತೃತ್ವದಲ್ಲಿ ಜರುಗಿದ ಬೃಹತ್ ಮತದಾನ ಜಾಗೃತಿ ಅಭಿಯಾನ ಗಮನ ಸೆಳೆಯಿತು.

**ಬಿಜೆಪಿ ಅಭ್ಯರ್ಥಿ ಅನಿಲ್ ಮೆಣಸಿನಕಾಯಿ ಭರವಸೆ**

## ಗೆದ್ದರೆ ಗದಗದಲ್ಲಿ ಜವಳಿ ಪಾರ್ಕ್ ಸ್ಥಾಪನೆ

■ **ವಿಜಯಸಾಕ್ಷಿ ಸುದ್ದಿ, ಗದಗ**

ನೇಕಾರಿಕೆಗೆ ಬೆಟಗೇರಿ ಹೆಸರುವಾಸಿಯಾಗಿದ್ದು, ಸಾವಿರಾರು ಕುಟುಂಬಗಳು ನೇಕಾರಿಕೆಯನ್ನೇ ಅವಲಂಬಿಸಿ ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ. ಇಂತಹ ಸ್ವಾಭಿಮಾನಿ ನೇಕಾರರಿಗೆ ಐವತ್ತೈದು ವರ್ಷ ಅಧಿಕಾರದಲ್ಲಿದ್ದರೂ ಏನನ್ನೂ ಮಾಡಲಿಲ್ಲ ಎಂದು ಗದಗ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅನಿಲ್ ಮೆಣಸಿನಕಾಯಿ ಹೇಳಿದರು.

ಬೆಟಗೇರಿಯ ಶಿವರತ್ನ ಪ್ಯಾಲೇಸ್‌ನಲ್ಲಿ ನಡೆದ ಜವಳಿ ಉತ್ಪಾದಕರು ಹಾಗೂ ವಿವಿಧ ವ್ಯಾಪಾರಸ್ಥರ, ಎಸ್ ಎಸ್ ಕೆ ಸಮಾಜದ ಬೆಂಬಲಾರ್ಥ ಸಭೆಯಲ್ಲಿ ಅವರು ಮಾತನಾಡಿ ಮತಯಾಚಿಸಿದರು.

ಬೆಟಗೇರಿಯಲ್ಲಿ ನೇಕಾರರ ಕುಟುಂಬಗಳು ಬಹಳಷ್ಟಿದ್ದು, ಜವಳಿ ಸಚಿವರಾಗಿದ್ದಾಗ ನೇಕಾರರಿಗಾಗಿ ಹಲವು ಯೋಜನೆಗಳನ್ನು ರೂಪಿಸಲು ಸಾಕಷ್ಟು ಅವಕಾಶಗಳಿದ್ದವು. ಅದರೆ, ಅದ್ಯಾವುದನ್ನು ಮಾಡಲಿಲ್ಲ. ಗದಗನಲ್ಲಿ ಜವಳಿ ಪಾರ್ಕ್ ಸ್ಥಾಪನೆ ಮಾಡಬೇಕೆಂಬ ಕೂಗು ಬಹಳ ವರ್ಷಗಳಿಂದ ಕೇಳಿ ಬರುತ್ತಿದೆ. ಜವಳಿ ಪಾರ್ಕ್ ಸ್ಥಾಪಿಸಿ ಜವಳಿ ಉದ್ಯಮಕ್ಕೆ ಉತ್ತೇಜನ ನೀಡಬೇಕಿದ್ದ ಶಾಸಕರು ನಿಷ್ಕಾಳಜಿ ತೋರಿದರು ಎಂದರು.



ಗದಗ ಮತಕ್ಷೇತ್ರದ ಅಭಿವೃದ್ಧಿಗೆ ನನ್ನದೇಯಾದ ಗುರಿಗಳನ್ನಿಟ್ಟುಕೊಂಡಿದ್ದೇನೆ. ಟೆಕ್ಸಟೈಲ್ ಕ್ಲಸ್ಟರ್ ನಿರ್ಮಿಸುವ ಕನಸು ಕಂಡಿದ್ದೇನೆ. ಬೆಟಗೇರಿ ಭಾಗದಲ್ಲಿ ಜವಳಿ ಪಾರ್ಕ್ ಸ್ಥಾಪಿಸಿ ಜವಳಿ ಉದ್ಯಮಕ್ಕೆ ಉತ್ತೇಜನ ನೀಡಲು ಶ್ರಮಿಸುತ್ತೇನೆ.

**– ಅನೀಲ್ ಮೆಣಸಿನಕಾಯಿ,** ಬಿಜೆಪಿ ಅಭ್ಯರ್ಥಿ

ಡಬಲ್ ಇಂಜಿನ್ ಸರ್ಕಾರ ಕೈಮಗ್ಗ ನೇಕಾರಿಕೆ, ಇತರೆ ಕೈಮಗ್ಗ ನೇಕಾರಿಕೆ ಚಟುವಟಿಕೆಗಳನ್ನು ನಡೆಸುವ ನೇಕಾರರಿಗೆ ನೇಕಾರ ಸಮ್ಮಾನ್ ಯೋಜನೆಯಡಿ 2,000 ರೂ. ಆರ್ಥಿಕ ನೆರವು ನೀಡಿ ಆರ್ಥಿಕವಾಗಿ ಸದೃಢವಾಗಿಸುತ್ತಿದೆ. ಹೀಗಾಗಿ ಮೇ 10ರಂದು ನಡೆಯುವ ಚುನಾವಣೆಯಲ್ಲಿ ಕಮಲದ ಚಿಹ್ನೆಗೆ ಮತ ನೀಡುವಂತೆ ಮನವಿ ಮಾಡಿದರು.

ದೇಶ ಮತ್ತು ಧಾರ್ಮಿಕತೆಯ ಉಳಿವಿಗಾಗಿ ಶ್ರಮಿಸುತ್ತಿರುವ ಬಿಜೆಪಿ ಜೊತೆ ಎಸ್‌ಎಸ್‌ಕೆ ಸಮುದಾಯ ಸದಾ ಇರಲಿದೆ ಎಂದು ಅನಿಲ್ ಮೆಣಸಿನಕಾಯಿ ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಶಿವಪ್ಪ ಮುಳಗುಂದ, ರಾಘವೇಂದ್ರ ಯಳವತ್ತಿ, ಶ್ರೀನಿವಾಸ ಕರಿ, ಅನಿಲ್ ಗಡ್ಡಿ, ಮಾಧುಸಾ ಮೇರವಾಡೆ, ಶ್ರೀನಿವಾಸ ಹುಬ್ಬಳ್ಳಿ, ಯಲ್ಲಪ್ಪ ಕಾಂಬ್ಳೆಕರ್, ದಶರಥರಾಜ ಕೊಳ್ಳಿ, ಚೆನ್ನಪ್ಪ ನೆಗಳೂರ, ಬಸೀರ್ ಮುಳಗುಂದ, ಶರಣಪ್ಪ ಚುರ್ಚಪ್ಪನವರ, ಕೊಟ್ರೇಶ ಐಲಿ, ಪ್ರಕಾಶ್ ಹಿಂಡಿ, ದೇವಪ್ಪ ಗೋಟೂರ, ಹುಚ್ಚಪ್ಪ ಭಜಂತ್ರಿ, ವೀರಭದ್ರಪ್ಪ ದೇವದಾರ, ಸುಭಾಸ್ ಗಂಜಿ, ವೀರಭದ್ರಪ್ಪ ಗಂಜಿ, ಶಂಕರ್ ಕಾಕಿ, ಬೂದಪ್ಪ ಹುಣಸೀಮರದ, ಮಲ್ಲೇಶ ಹುಲಕೋಟಿ, ಬಸವರಾಜ್ ಗಾರವಾಡ, ಉಮಾಕಾಂತ ಮೇರವಾಡೆ ಇದ್ದರು.

## ಶಿರಹಟ್ಟಿಯಲ್ಲಿ ಸ್ವೀಪ್ ಸಮಿತಿಯಿಂದ ವಿಶೇಷ ಕಾರ್ಯಕ್ರಮ

■ **ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ**

ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ತಾಲೂಕಾ ಸ್ವೀಪ್ ಸಮಿತಿ ವತಿಯಿಂದ ತಾಪಂ ಇಓ ಎಸ್.ನಾರಾಯಣ ನೇತೃತ್ವದಲ್ಲಿ ರವಿವಾರ ಮತದಾನದ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ತಾಲೂಕಾ ಸ್ವೀಪ್ ಸಮಿತಿ ಅಧ್ಯಕ್ಷ ಎಸ್.ನಾರಾಯಣ, ಚುನಾವಣೆ ಆಯೋಗದ ನಿರ್ದೇಶನದಂತೆ ನಮ್ಮ ನಡೆ ಮತಗಟ್ಟೆ ಕಡೆ ಕಾರ್ಯಕ್ರಮದ ಅಂಗವಾಗಿ ಪಟ್ಟಣದ ವಿಕಲಚೇತನರ ಮಾದರಿ ಮತಗಟ್ಟೆ ಸಂಖ್ಯೆ–21, ಸಖಿ ಮತಗಟ್ಟೆ ಸಂಖ್ಯೆ–15ರಂದು



ಚುನಾವಣಾಧಿಕಾರಿ ಕಿಶನ್ ಕಲಾಲ ಅವರಿಂದ ಚುನಾವಣಾ ಧ್ವಜಾರೋಹಣ ಮಾಡಲಾಯಿತು. ತದನಂತರ ಮಾರುಕಟ್ಟೆ ಮತ್ತು ಬಸ್ ನಿಲ್ದಾಣದಲ್ಲಿ ಜಾಗೃತಿ ಮೂಡಿಸಲಾಯಿತು ಎಂದರು.

ಚುನಾವಣಾಧಿಕಾರಿ ಕಿಶನ್ ಕಲಾಲ, ಮುಖ್ಯಾಧಿಕಾರಿ ಸಿದ್ದರಾಯ ಕಟ್ಟಿಮನಿ, ಎಸ್.ಕೆ.ಇನಾಂದಾರ, ಎಚ್.ಎ.ಕೊಂಡಿಕೊಪ್ಪ, ಅಶ್ವಿನಿ ಕುರಡಗಿ, ಮತ್ತು ಚುನಾವಣಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಮತದಾರರಲ್ಲಿ ಹುಮ್ಮಸ್ಸು ಮೂಡಿಸಿದ ಸ್ವೀಪ್ ಕಾರ್ಯಚಟುವಟಿಕೆ**

## ರಂಗು ರಂಗಿನ ಚಿತ್ತಾರಗಳಿಂದ ಕಂಗೊಳಿಸುತ್ತಿರುವ ಮತಗಟ್ಟೆಗಳು



■ **ವಿಜಯಸಾಕ್ಷಿ ಸುದ್ದಿ, ಗದಗ**

ಶಿರಹಟ್ಟಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಲಕ್ಷ್ಮೇಶ್ವರ ತಾಲೂಕು ವ್ಯಾಪ್ತಿಯಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ, ತಾಲೂಕು ಸ್ವೀಪ್ ಸಮಿತಿ ಮತದಾರರನ್ನು ಆಕರ್ಷಿಸಲು ವಿಶೇಷ ಪ್ರಯತ್ನಕ್ಕೆ ಮುಂದಾಗಿದೆ. ಪಾರಂಪರಿಕ ವೃತ್ತಿ, ಸಾಂಸ್ಕೃತಿಕ ಕಲೆ ಹಾಗೂ ಸ್ಥಳೀಯರ ಅಭಿಲಾಷೆಯನ್ನು ಮನಗೊಂಡು ಮತದಾನ ಕೇಂದ್ರವನ್ನು ಅಲಂಕರಿಸಲು ಆರಂಭಿಸಿದೆ.

ಲಕ್ಷ್ಮೇಶ್ವರ ತಾಲೂಕು ವ್ಯಾಪ್ತಿಯ ಪುರಸಭೆ ಹಾಗೂ ಗ್ರಾಮೀಣ ಭಾಗಗಳು ಸೇರಿ ಒಟ್ಟು 5 ಮತಗಟ್ಟೆಗಳನ್ನು ಆಕರ್ಷಕಗೊಳಿಸಲು ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಜಿಲ್ಲಾಡಳಿತ ಮೂರು ಥೀಮ್ (ವಿಷಯ)ಗಳನ್ನು ಆಯ್ಕೆ ಮಾಡಿ, ಮತಗಟ್ಟೆಗಳನ್ನು ಪೇಂಟಿಂಗ್ ಮೂಲಕ ಆಕರ್ಷಕಗೊಳಿಸಲು ಗುರುತಿಸಿದೆ. ಸಖಿ ಮತಗಟ್ಟೆ, ಯುವ ಮತಗಟ್ಟೆ ಮತ್ತು ಶಿಗ್ಲಿ ಗ್ರಾಮದ ಪಾರಂಪರಿಕ ವೃತ್ತಿಯಾದ ನೇಕಾರಿಕೆಯ ಚಿತ್ರಗಳ ಕಣ್ಮನ ಸೆಳೆಯುವಂತಿವೆ.

**ಶಿಗ್ಲಿ ಗ್ರಾಮದ ಮತಗಟ್ಟೆ ಸಂಖ್ಯೆ:** 202, 203 ಮತ್ತು 204 ಗಳನ್ನು ಪಾರಂಪರಿಕ ಮತಗಟ್ಟೆಗಳಾಗಿ ರೂಪಿಸಲಾಗಿದೆ. ಸ್ಥಳೀಯ ಪಾರಂಪರಿಕ ಕೈಮಗ್ಗದ ನೇಕಾರಿಕೆ ವೃತ್ತಿಯ ಚಿತ್ರಗಳಿಗೆ ಇಲ್ಲಿ ಆದ್ಯತೆ ನೀಡಲಾಗಿದೆ. ಶಿಗ್ಲಿ ಸೀರೆಯಿಂದಲೇ ಹೆಸರುವಾಸಿಯಾದ ಗ್ರಾಮ ಇದಾಗಿದ್ದು, ಈಗಲೂ ಇಲ್ಲಿನ ನೂರಾರು ಕುಟುಂಬಗಳು ಕೈಮಗ್ಗ ನೇಕಾರಿಕೆ ವೃತ್ತಿಯನ್ನು ಮುಂದುವರಿಸಿಕೊಂಡು ಬಂದಿವೆ. ಸ್ಥಳೀಯರ ಆಶಯಕ್ಕೆ ತಕ್ಕಂತೆ ಇಲ್ಲಿನ ಮೂರು ಮತಗಟ್ಟೆಗಳನ್ನು ಮಾದರಿ ಮತಗಟ್ಟೆಗಳಾಗಿ ಚಿತ್ರರೂಪದಲ್ಲಿ ಕಂಗೊಳಿಸಲಿವೆ.

**ಸಖಿ ಮತಗಟ್ಟೆ:**

ನಗರದ ಬಸ್ತಿಬಣ ಪ್ರದೇಶದಲ್ಲಿಯ ಮತಗಟ್ಟೆ ಸಂಖ್ಯೆ– 108 ಸರಕಾರಿ ಮಾದರಿ ಪ್ರಾಥಮಿಕ ಶಾಲೆ ನಂ–4 ಅನ್ನು ಸಖಿ ಮತಗಟ್ಟೆಯಾಗಿ ಚಿತ್ರಿಸಲಾಗಿದೆ. ಸಂಪೂರ್ಣ ಮತಗಟ್ಟೆಗೆ ಗುಲಾಬಿ ಬಣ್ಣದಲ್ಲಿ ಹಚ್ಚಲಾಗಿದ್ದು, ಮಹಿಳೆಯ ತೋರು ಬೆರಳನ್ನು ಹಣೆಯ ಸಿಂಧೂರದ ಭಾಗಕ್ಕೆ ಮತದಾನದ ಶಾಯಿ ಬರುವ ಹಾಗೆ ಚಿತ್ರ ಬಿಡಿಸಲಾಗಿದೆ.

**ಐತಿಹಾಸಿಕ ಮತಗಟ್ಟೆ:**

ಲಕ್ಷ್ಮೇಶ್ವರದ ಅಂಬೇಡ್ಕರ್ ನಗರದಲ್ಲಿರುವ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿಯ ಮತಗಟ್ಟೆ ಸಂಖ್ಯೆ– 117ನ್ನು ಐತಿಹಾಸಿಕ ವಿಷಯ ಚಿತ್ರಗಳಿಂದ ಕಂಗೊಳಿಸುವಂತೆ ಮಾಡಲಾಗಿದೆ. ತಪ್ಪದೆ ಮತದಾನ ಮಾಡಿ, ಮತದಾನ ಮಾಡುವುದು ನಿಮ್ಮ ಜವಾಬ್ದಾರಿ ಮತ್ತು ಹಕ್ಕು, ಯೋಚಿಸಿ ಮತದಾನ ಮಾಡಿ, ನಿಮ್ಮ ಮತವನ್ನು ಮಾರಬೇಡಿ, ನಿಮ್ಮ ಮತ ನಾಡಿಗೆ ಹಿತ ಎಂಬ ಸಾಲುಗಳು ಮತದಾರರ ಹಕ್ಕು ಮತ್ತು ಜವಾಬ್ದಾರಿಯ ಅರಿವು ಮೂಡಿಸಲಿವೆ.

**ಯುವ ಮತಗಟ್ಟೆ:**

ಬಟ್ಟೂರ ಗ್ರಾಮ ಪಂಚಾಯತಿ ವ್ಯಾಪ್ತಿಯ ಮತಗಟ್ಟೆ ಸಂಖ್ಯೆ–76 ಕುಂದ್ರಳ್ಳಿ ತಾಂಡಾದಲ್ಲಿರುವ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಮತಗಟ್ಟೆಯನ್ನು ಯುವ ಮತಗಟ್ಟೆಯನ್ನಾಗಿ ರೂಪಿಸಲಾಗಿದೆ. ಯುವ ಮತದಾರರು ಉಲ್ಲಾಸಿತರಾಗಿ ಮತ ಚಲಾವಣೆಯಲ್ಲಿ ತೊಡಗಿರುವಂತೆ ಚಿತ್ರರೂಪದಲ್ಲಿ ಬಿಡಿಸಲಾಗಿದೆ.




ಮತದಾನ ಪ್ರಮಾಣ ಹೆಚ್ಚಿಸಲು ಜಿಲ್ಲಾ, ತಾಲೂಕು ಸ್ವೀಪ್ ತಂಡ ನಿರಂತರವಾಗಿ ಕಾರ್ಯಚಟುವಟಿಕೆ ನಡೆಸುತ್ತಿದೆ. ಲಕ್ಷ್ಮೇಶ್ವರ ತಾಲೂಕು ವ್ಯಾಪ್ತಿಯಲ್ಲಿ ಸಖಿ, ಯುವ ಮತಗಟ್ಟೆ ಹಾಗೂ ನೇಕಾರಿಕೆ ವಿಷಯಗಳ ಆಧಾರಿತ ಮತಗಟ್ಟೆಯಾಗಿ ರೂಪಿಸಲಾಗಿದೆ. ಮತದಾರರು ಮೇ 10 ರಂದು ಮತಗಟ್ಟೆಗೆ ಬಂದಾಗ ಅವರ ಗಮನ ಸೆಳೆಯಲಿವೆ.

**– ಎಂ.ವಿ. ಬಡಿಗೇರ,** ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತ್, ಲಕ್ಷ್ಮೇಶ್ವರ

## ಎಚ್.ಕೆ. ಪಾಟೀಲರ ಗೆಲುವಿಗೆ ಅಭಿಮಾನಿಗಳಿಂದ ದೀಡ ನಮಸ್ಕಾರ

■ **ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಚ್.ಕೆ. ಪಾಟೀಲರ ಗೆಲುವಿಗಾಗಿ, ಅವರ ಅಭಿಮಾನಿಗಳು ಪೂಜೆ–ಪುನಸ್ಕಾರ ಮತ್ತು ದೀಡ ನಮಸ್ಕಾರಗಳಲ್ಲಿ ಸ್ವಯಂ ಪ್ರೇರಿತರಾಗಿ ತೊಡಗಿದ್ದಾ–ರೆ. ಈ ಹಿನ್ನೆಲೆಯಲ್ಲಿ, ನಗರದ 3ನೇ ವಾರ್ಡಿನಲ್ಲಿ ವಸಂತಸಿಂಗ್ ಜಮಾದಾರ ನಗರದಲ್ಲಿರುವ ಈಶ್ವರ ದೇವಸ್ಥಾನದಿಂದ 4ನೇ ವಾರ್ಡಿನಲ್ಲಿರುವ ಮಂಜುನಾಥ ದೇವಸ್ಥಾನದವರಿಗೂ ಯುವಕರು ದೀಡ ನಮಸ್ಕಾರ ಹಾಕಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅರವಿಂದ ಹುಲ್ಲೂರು, ನದಿಮುಲ್ಲಾ ಸಿದ್ದಣ್ಣ ಮೇಳನವರ, ಹುಲ್ಲೇಶ ಎಚ್.ಭಜಂತ್ರಿ, ಇಸ್ಮಾಯಿಲ್‌ಸಾಬ ಡಂಬಳ, ಪ್ರಭು ಬುರಬುರೆ, ಭೀಮಣ್ಣ ಪಂನ್ನೂರು, ರಾಮಣ್ಣ ರಾಂಪುರ, ಲಕ್ಷ್ಮಣ ಭಜಂತ್ರಿ, ಮಲ್ಲಣ್ಣ ತಟ್ಟಿ, ಭೋಜಪ್ಪ ಹೇಗಡೆ, ವಾಸು ಹುಣಿಸಿಮರದ, ಕುವಾರ ನೆಟ್ಟಗತ್ತಿ, ಹೊಳಬಸಪ್ಪ ಅಕ್ಕಿ, ಈರಮ್ಮ ಕೆಂಚ್ಚಿ, ಭೀಮಣ್ಣ



ಪಂನ್ನೂರು, ಖಾದರಸಾಬ ಒಲಿ, ಮೋದಿನಸಾಬ ಹುಬ್ಬಳ್ಳಿ, ರಮಜಿ ಗದ್ದವಾಲ ಸಾಂದರ್ಭಿಕವಾಗಿ ಮಾತನಾಡಿದರು.

**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ಗದಗ ಕ್ಷೇತ್ರವನ್ನು ಪ್ರಗತಿಯತ್ತ ಕೊಂಡೊಯ್ಯಲು ಈ ಬಾರಿ ನನಗೆ ಶಕ್ತಿ ನೀಡಿ

▶▶ಮೊದಲನೇ ಪುಟದಿಂದ

ಬಿಜೆಪಿ ಹೈಕಮಾಂಡ್ ಟಿಕೆಟ್ ನೀಡುವ ಮೂಲಕ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶದ ಜೊತೆಗೆ ಆಶೀರ್ವಾದವನ್ನು ಮಾಡಿದೆ. ಗದಗ ಮತಕ್ಷೇತ್ರದ ಜನತೆ ಮತಶಕ್ತಿಯ ಮೂಲಕ ನನಗೆ ಈ ಬಾರಿ ಶಾಸಕನಾಗಿ ಆಯ್ಕೆ ಮಾಡಿ, ವಿಧಾನಸಭೆಗೆ ಕಳಿಸಿದರೆ ನಿಮ್ಮ ದನಿಯಾಗಿ ನನ್ನ ಉಸಿರಿರುವರೆಗೂ ಪ್ರಾಮಾಣಿಕವಾಗಿ ನಿಮ್ಮ ಸೇವೆ ಮಾಡುತ್ತೇನೆ.

– ಅನಿಲ ಮೆಣಸಿನಕಾಯಿ.
ಗದಗ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ.

ಬೆಟಗೇರಿ ನಗರಸಭೆಯ ಮಾಜಿ ಅಧ್ಯಕ್ಷ, ಬಿಜೆಪಿ ಹಿರಿಯ ಮುಖಂಡ ಶಿವಪ್ಪ ಮುಳಗುಂದ ಮಾತನಾಡಿ, ಪ್ರಧಾನಿ ಮೋದಿ ಅವರು ನೇಕಾರ ಸಮ್ಮಾನ ಯೋಜನೆ ಅಡಿಯಲ್ಲಿ 5000 ರೂ. ಪ್ರೋತ್ಸಾಹ ಧನವನ್ನ ನೇರವಾಗಿ ನೇಕಾರರ ಖಾತೆಗೆ ಜಮೆ ಮಾಡುತ್ತಿದ್ದಾರೆ. ನೇಕಾರಿಕೆಯನ್ನೇ ನಂಬಿ ಬದುಕು ಸಾಗಿಸುತ್ತಿರುವ ನೇಕಾರ ವರ್ಗದ ಉಳಿವಿಗಾಗಿ ಬೆಟಗೇರಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆ ಅತ್ಯಗತ್ಯವಾಗಿದೆ. ಸೂರಿಲ್ಲದ ನೇಕಾರ ಕಾರ್ಮಿಕರಿಗಾಗಿ ಬೆಟಗೇರಿ ಭಾಗದಲ್ಲಿ 2000 ಮನೆಗಳನ್ನು ನಿರ್ಮಿಸಿದರೆ ಅನುಕೂಲವಾಗಲಿದೆ ಎಂದರು.

ಗದಗ-ಬೆಟಗೇರಿ ನಗರಸಭೆಯ ಸ್ಥಾಯಿಸಮಿತಿ ಅಧ್ಯಕ್ಷ ರಾಘವೇಂದ್ರ ಯಳವತ್ತಿ, ಬೆಟಗೇರಿ ಜವಳಿ ಉತ್ಪಾದಕರ ಸಂಘದ ಅಧ್ಯಕ್ಷ ಅನಿಲ ಗಡ್ಡಿ ಸಾಂದರ್ಭಿಕವಾಗಿ ಮಾತನಾಡಿದರು. ವೇದಿಕೆಯ ಮೇಲೆ ನಗರಸಭಾ ಸದಸ್ಯೆ ವಿಜಯಲಕ್ಷ್ಮೀ ಕಾಕಿ, ಸುಭಾಸ ಗಂಜಿ, ಪ್ರಭು ನೀಲಗುಂದ, ಶರಣಪ್ಪ ಚುರ್ಚಪ್ಪನವರ, ಶ್ರೀನಿವಾಸ ಹುಬ್ಬಳ್ಳಿ, ದೇವೇಂದ್ರಪ್ಪ ಗೋಟೂರ, ಶ್ರೀನಿವಾಸ ಕರಿ, ಮಂಜುನಾಥ ತಳವಾರ, ದಶರಥ ಕೊಳ್ಳಿ, ಬೂದಪ್ಪ ಹುಣಶೀಮರದ, ಅಶೋಕ ಮುಳಗುಂದ, ಲಕ್ಷ್ಮಣ ಮುಳಗುಂದ, ರವಿ ಗಂಜಿ, ರವಿ ಚುಂಚಾ, ಬಸೀರ ಅಹಮ್ಮದ ಮುಳಗುಂದ ಸೇರಿದಂತೆ ಹಲವರಿದ್ದರು. ಇದೇ ಸಂದರ್ಭದಲ್ಲಿ ಅನಿಲ ಮೆಣಸಿನಕಾಯಿ ಅವರ ಚುನಾವಣಾ ಕಾರ್ಯಕ್ಕಾಗಿ ಗಣ್ಯ ಜವಳಿ ಉದ್ಯಮಿ ವಾಸು ಮತ್ತು ಕೊಟ್ರೇಶ ಐಲಿ ಸಹೋದರರು 1 ಲಕ್ಷ ರೂ. ಗಳ ಚೆಕ್ ನೀಡಿ ಪ್ರೋತ್ಸಾಹಿಸಿದರು. ಬಿಜೆಪಿ ಯುವನಾಯಕ ಮಂಜುನಾಥ ಶಿವಣ್ಣ ಮುಳಗುಂದ ಪ್ರಾಸ್ತಾವಿಕವಾಗಿ ಮಾತನಾಡಿ, ಕಾರ್ಯಕ್ರಮ ನಿರೂಪಿಸಿದರು.

# ಬದ್ಧತೆಯಿಲ್ಲದ ಭರವಸೆಯನ್ನು ಜನತೆ ಎಂದಿಗೂ ಒಪ್ಪುವುದಿಲ್ಲ

▶▶ಮೊದಲನೇ ಪುಟದಿಂದ

ಯಾವುದೇ ವಿಶ್ವಾಸಾರ್ಹತೆ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಲೆ ಏರಿಕೆ ಬಗ್ಗೆ ನಿಮ್ಮಲ್ಲಿ ಪರಿಹಾರ ಏನಿದೆ? ಬದಲಾಗಿ, ನಾವು ಗೃಹಲಕ್ಷ್ಮೀ, ಯುವ ನಿಧಿ ಯೋಜನೆಗಳ ಮೂಲಕ ಬೆಲೆ ಏರಿಕೆಗೆ ನಿಯಂತ್ರಣಕ್ಕೆ ಮುಂದಾಗಲಿದ್ದೇವೆ. ನಮ್ಮ ಗ್ಯಾರಂಟಿ ಯೋಜನೆಗಳ ಬಗ್ಗೆ ನಮಗೆ ನಂಬಿಕೆಯಿದೆ. ಜನ ಒಪ್ಪಿಕೊಂಡಿದ್ದಾರೆ. ನಿಮ್ಮ ವಚನಭ್ರಷ್ಟತೆಯ ಬಗ್ಗೆ ಜನರೇ ಮಾತನಾಡುತ್ತಿದ್ದಾರೆ. ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿರುವ ನಿಮ್ಮ ಪ್ರಣಾಳಿಕೆಗೆ ಯಾವುದೇ ಮಹತ್ವವಿಲ್ಲ. ಬಡವರ ಬದುಕಿನಲ್ಲಿ ಧನಾತ್ಮಕ ಬದಲಾವಣೆ ತರುವುದೇ ನಮ್ಮ ಉದ್ದೇಶವಾಗಿದೆ ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸುಜಾತಾ ದೊಡ್ಡಮನಿ, ಉಸ್ತುವಾರಿ ಕೆ.ಎಮ್. ಸಯ್ಯದ್ ಸೇರಿದಂತೆ ಮುಖಂಡರು ಇದ್ದರು.

# 'ನಿವೃತ್ತ ಸೈನಿಕರು ನಮ್ಮ ಸಮಾಜದ ಹೆಮ್ಮೆ'

▶▶ಮೊದಲನೇ ಪುಟದಿಂದ

ಕೊರಕನವರ, ದ್ಯಾಮನಗೌಡ ದಿಡ್ಡಿಮನಿ, ವೆಂಕಪ್ಪ ಕಲಾಲ, ಚಂದ್ರಶೇಖರಪ್ಪ ಬಿಳಿಯಲಿ, ಪ್ರವೀಣ ಹೂಗಾರ, ದಾವಲ್ ಅಂಗಡಿ, ನಾಗಪ್ಪ ಹೂಗಾರ, ಚನ್ನಪ್ಪ ನಾಗಸಮುದ್ರ, ಗಿರೀಶ ಅಂಗಡಿ, ಶಂಕ್ರಪ್ಪ ತಳವಾರ, ಬಸವರಾಜ ಹಿರೇಹಾಳ, ರೇವಣಪ್ಪ ಅರೆಮನಿ, ವೀರನಾರಿ ಸರೋಜಾ ಅಬ್ಬಿಗೇರಿ, ಲಕ್ಷ್ಮೇಶ್ವರ ಘಟಕದ ನಾಮನಿರ್ದೇಶಿತ ಅಧ್ಯಕ್ಷ ಚನ್ನಬಸಪ್ಪ ಹುಡೇದ, ರವಿ ಕರೆಣ್ಣವರ, ಅಧ್ಯಕ್ಷ ದೊಡ್ಡಪ್ಪ ಪೂಜಾರ, ಹನುಮಂತಪ್ಪ ಶೀಲವಂತರ, ಅಶೋಕ ಪ್ಯಾಟಿ, ಬಸವರಾಜ ಸೂರಣಗಿ, ಈಶ್ವರ ಕಮ್ಮಾರ, ಈರಣ್ಣ ಅಣ್ಣಿಗೇರಿ, ವೆಂಕಟೇಶ ನಾಗನೂರ, ಅಶೋಕ ಕಲ್ಲಣ್ಣವರ, ಎಚ್.ಜಿ.ಸಂಜೀವಣ್ಣವರ, ಎಂ.ಡಿ.ತಹಸೀಲ್ದಾರ, ಸಂತೋಷ ಅಣ್ಣಿಗೇರಿ ಇದ್ದರು.

# 'ಅಸಂಘಟಿತ ಕಾರ್ಮಿಕರು ಸಂಘಟಿತರಾಗಿ ಸೌಲಭ್ಯ ಪಡೆಯಬೇಕು'

▶▶ಮೊದಲನೇ ಪುಟದಿಂದ

ಅತಿಥಿಯಾಗಿ ಆಗಮಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ.ಐ.ಹಿರೇಮನಿಪಾಟೀಲ ಮಾತನಾಡಿ, ಕಾರ್ಮಿಕರು ತಮ್ಮ ಕಾಯಕವನ್ನು ನಿಷ್ಠೆಯಿಂದ ಮಾಡಿ ಪ್ರತಿಫಲ ಪಡೆಯಬೇಕು. ಮಕ್ಕಳಿಗೆ ಉನ್ನತ ಶಿಕ್ಷಣ, ಉತ್ತಮ ಜೀವನ ನಡೆಸುವಂತೆ ಪ್ರೇರಣೆ ನೀಡಬೇಕೆಂದರು.

ಇನ್ನೋರ್ವ ಮುಖ್ಯ ಅತಿಥಿ ಜಿಲ್ಲಾ ಕಾರ್ಮಿಕ ಅಧಿಕಾರಿ ಬಿ.ಆರ್. ಜಾಧವ ಮಾತನಾಡಿ, ಕಾರ್ಮಿಕ ಇಲಾಖೆಯಿಂದ ಕಾರ್ಮಿಕರಿಗೆ ಹಲವು ಸೌಲಭ್ಯಗಳಿದ್ದು ಅವುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದರು.

ಅತಿಥಿಗಳಾದ ಉತ್ತರ ಕರ್ನಾಟಕ ಕಟ್ಟಡ ನಿರ್ಮಾಣ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ಗದಗ ಜಿಲ್ಲಾ ಅಧ್ಯಕ್ಷ ಎಂ.ಬಿ.ಬನ್ನೂರ, ಉತ್ತರ ಕರ್ನಾಟಕ ಕಟ್ಟಡ ಕಾರ್ಮಿಕ ಸಂಘ ಹುಬ್ಬಳ್ಳಿಯ ಅಧ್ಯಕ್ಷ ಎಂ.ಎಚ್.ಮುಲ್ಲಾ, ಗದಗ ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿ ಬಿ.ಎಸ್.ಮಾಡಲಗೇರಿ, ವಕೀಲರಾದ ಗುರುರಾಜ ಗೌರಿ ಕಾರ್ಮಿಕರು ಮತ್ತು ಕಲ್ಯಾಣ ವಿಷಯವಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಗದುಗಿನ ಹಿರಿಯ ಇಂಜನಿಯರ್ ಸಿ.ಎ.ಹಳ್ಳಿಗುಡಿ ಗದಗ ಪರಿಸರದಲ್ಲಿ ಆರಂಭದಲ್ಲಿ ಕಾರ್ಮಿಕರನ್ನು ಒಂದುಗೂಡಿಸಿ ಅವರನ್ನು ಸಂಘಟನಾತ್ಮಕವಾಗಿ ಗಟ್ಟಿಗೊಳಿಸಿ ವಿವಿಧ ಉದ್ಯೋಗದಲ್ಲಿ ತೊಡಗಿಸಿಕೊಂಡು ಅವರಿಗೆ ಪ್ರತ್ಯೇಕ ಸಂಘಟನೆ ಮಾಡಿ ಇಂದಿನವರೆಗೂ ಮುನ್ನಡೆಸಿಕೊಂಡು ಬಂದಿರುವುದನ್ನು ಸ್ಮರಿಸಿಕೊಂಡರು.

ಕಾರ್ಯಕ್ರಮದಲ್ಲಿ ದೇವಪ್ಪ ವಗ್ಗನವರ, ಯಮನೂರಸಾಬ ನದಾಫ, ಚಂದ್ರು ನರಸಾಪೂರ, ಮಂಜುನಾಥ ವಗ್ಗನವರ, ಶರೀಫಸಾಬ ಹುಯಿಲಗೋಳ, ದಾವಲಸಾಬ ಬನ್ನೂರ, ನನ್ನೇಸಾಬ ಶಿರಹಟ್ಟಿ, ಸುಭಾಸ ನಿಡಗುಂದಿ, ಯಶೋದಾ ಜೂಜಗಾರ, ಮಾರುತಿ ಭಜಂತ್ರಿ, ಬಾಬಾಜಾನ ಯಲಿಗಾರ, ಬಸವರಾಜ ಪೂಜಾರ, ದಾವಲಸಾಬ ಅಕ್ಕಿ, ಲಕ್ಷ್ಮಣ ಶೇಷಗಿರಿ, ಮೌಲಾಸಾಬ ಪೆಂಡಾರಿ, ದೇವಪ್ಪ ಪೂಜಾರ ಸೇರಿದಂತೆ ಮುಂತಾದವರಿದ್ದರು.



ವಿಧಾನಸಭಾ ಚುನಾವಣೆ ಅಂಗವಾಗಿ ಗದಗ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅನಿಲ್ ಮೆಣಸಿನಕಾಯಿ ಅವರ ಪರ ಗದಗ ಶಹರ ಮಂಡಲ ಯುವ ಮೋರ್ಚಾ ಪದಾಧಿಕಾರಿಗಳು ಮತಯಾಚಿಸಿದರು. ಬೆಳದಡಿ ತಾಂಡಾ, ನಭಾಪುರ ತಾಂಡಾ, ಕಬಲಾಯತಕಟ್ಟಿ, ನಾರಾಯಣಪುರ ತಾಂಡಾಗಳಲ್ಲಿ ಪ್ರಚಾರ ನಡೆಸಿದರು. ಗೋಪಾಲ ಗಡ್ಡದವರ, ಶಿವು ಗೋಟೂರು, ಶ್ರೀಕಾಂತ್ ಆದ್ಯಪ್ಪನವರ, ಚಂದ್ರಶೇಖರ್ ಒಂಟೆತ್ತಿನವರ, ಪುನೀತ್ ಬಾಂಡಗೆ, ಪ್ರದೀಪ್ ಮುತ್ತಾಳ, ಮಲ್ಲಿಕಾರ್ಜುನ್ ಮಾದರ, ಪ್ರಶಾಂತ್ ಬೆಟಗೇರಿ, ವೆಂಕಟೇಶ್ ಬಬೀಬ್, ಲಕ್ಷ್ಮಣ ವಾಲ್ಮೀಕಿ ಸೇರಿದಂತೆ ಅನೇಕರು ಇದ್ದರು.

## ವಿವಿಧ ಕಲಾತಂಡಗಳಿಂದ ಅದ್ದೂರಿ ಮೆರವಣಿಗೆ

# ಗ್ರಾಮದೇವತೆಯ ಜಾತ್ರಾ ಮಹೋತ್ಸವಕ್ಕೆ ಚಾಲನೆ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ಅಡರಕಟ್ಟಿ ಗ್ರಾಮದಲ್ಲಿ ಪ್ರತಿ 12 ವರ್ಷಕ್ಕೊಮ್ಮೆ ನಡೆಯುವ ಗ್ರಾಮದೇವತೆಯ ಜಾತ್ರಾ ಮಹೋತ್ಸವ ಅಂಗವಾಗಿ ಗ್ರಾಮದೇವಿ ಮೂರ್ತಿ ಮತ್ತು ಕಳಸದ ಮೆರವಣಿಗೆ ಅದ್ದೂರಿಯಾಗಿ ಶ್ರದ್ಧಾ ಭಕ್ತಿಯಿಂದ ನೆರವೇರಿತು.



ಇಡೀ ಗ್ರಾಮದಲ್ಲಿನ ಎಲ್ಲ ಮನೆಗಳಿಗೂ ತಳಿರು ತೋರಣ, ಸುಣ್ಣ, ಬಣ್ಣ, ರಂಗೋಲಿಯಿಂದ ಹಾಗೂ ಫ್ಲೆಕ್ಸ್ ಬ್ಯಾನರ್‌ಗಳಿಂದ ಅಲಂಕೃತಗೊಂಡು 4 ದಿನಗಳ ಕಾಲ ನಡೆಯುವ ಜಾತ್ರಾ ಮಹೋತ್ಸವಕ್ಕೆ ಅದ್ದೂರಿ ಚಾಲನೆ ದೊರಕಿತು.

ಬೆಳಿಗ್ಗೆ ಮುಕ್ತಿಮಂದಿರ ಧರ್ಮಕ್ಷೇತ್ರದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಮೆರವಣಿಗೆಗೆ ಚಾಲನೆ ನೀಡಿ ಆಶೀರ್ವಚನ ನೀಡಿ, ದೇವಸ್ಥಾನಗಳು ಗ್ರಾಮದ ಜನರಲ್ಲಿ ಉತ್ತಮ ಸಂಸ್ಕಾರ, ಧರ್ಮ ಮಾರ್ಗ, ಭಯ, ಭಕ್ತಿಯನ್ನು ಮೂಡಿಸಿ ಶಾಂತಿ ನೆಮ್ಮದಿಯನ್ನು ಕಲ್ಪಿಸುವ ತಾಣಗಳಾಗಿವೆ. ಎಲ್ಲಿ ಸ್ತ್ರೀಯರು ಗೌರವಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನೆಲೆಸುತ್ತಾರೆ ಎನ್ನುವಂತೆ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಬಗ್ಗೆ ಗೌರವ ಭಾವನೆ ಇರುವುದನ್ನು ಕಾಣಬಹುದಾಗಿದೆ.

ಅಡರಕಟ್ಟಿ ಗ್ರಾಮದಲ್ಲಿ 12 ವರ್ಷಗಳಿಗೊಮ್ಮೆ ನಡೆಯುವ ಗ್ರಾಮ ದೇವತೆ ಜಾತ್ರೆ ಅತಿ ವಿಜೃಂಭಣೆಯಿಂದ ಸಾಂಪ್ರದಾಯಿಕವಾಗಿ ನೆರವೇರುತ್ತಿರುವದು ಇಲ್ಲಿನ ಜನರ ನಂಬಿಕೆ, ಭಕ್ತಿಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಮೇ.2ರಂದು ಬ್ರಾಹ್ಮೀ ಮುಹೂರ್ತದಲ್ಲಿ ಮಹಾಗಣಪತಿ ಸ್ಥಾಪನೆ ಉಮಾ ಮಹೇಶ್ವರ ಸ್ಥಾಪನೆ, ಪಂಚ ಕಳಸ ಸ್ಥಾಪನೆ ಮತ್ತು ನವಗ್ರಹ ಸ್ಥಾಪನೆಗಳು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನಡೆಯಲಿದೆ.

### ಅದ್ದೂರಿ ಮೆರವಣಿಗೆ

ಗ್ರಾಮದೇವಿಯ ಮೂರ್ತಿಯ ಮೆರವಣಿಗೆಗೆ ಪ್ರಸಿದ್ಧ ಜಾನಪದ ಕಲಾ ತಂಡಗಳು ಮೆರುಗು ನೀಡಿದವು. ಸಾಗರದ ಮಹಿಳಾ ಡೊಳ್ಳಿನ ಮೇಳ, ಬಾಲಕಿಯರ ಲಂಬಾಣಿ ನೃತ್ಯ ಮೇಳ, ರಾಣ್ಯಾ ಕುಣಿತದ ಮೇಳ, ಮರಗಾಲು ಕುಣಿತ, ವೀರಗಾಸೆ, ನಂದಿಕೋಲು ಕುಣಿತದ ಮೇಳ, ಲಕ್ಷ್ಮೇಶ್ವರದ ಕುದುರೆಕಾರರ ಕುಣಿತ, ಕುದುರೆ ಕುಣಿತಗಳು ಮೆರವಣಿಗೆಯ ರಂಗನ್ನು ಹೆಚ್ಚಿಸಿದ್ದವು. ಅದರೊಂದಿಗೆ ಹತ್ತಾರು ಜೋಗತಿಯರು ಪೂರ್ಣ ಕುಂಭಹೊತ್ತ ನೂರಾರು ಮಹಿಳೆಯರೊಂದಿಗೆ ಹೆಜ್ಜೆ ಹಾಕಿದ್ದು ವಿಶೇಷವಾಗಿತ್ತು.

ಬೆಳಿಗ್ಗೆಯಿಂದ ಆರಂಭವಾದ ಮೆರವಣಿಗೆ ಮಧ್ಯಾಹ್ನದವರೆಗೂ ನಡೆದಿತ್ತು. ಇಡೀ ಗ್ರಾಮದಲ್ಲಿ ಹಬ್ಬದ ವಾತಾವರಣ ಏರ್ಪಟ್ಟಿತ್ತು. ಇಡೀ ಗ್ರಾಮದ ಜನತೆ ಜಾತಿ-ಬೇಧ ಮರೆತು ಉಧೋ ಉಧೋ ಎಂಬ ಘೋಷಣೆ ಮೊಳಗಿಸಿದ್ದು ಕಂಡು ಬಂದಿತು. ಪಟಾಕಿಯ ಸದ್ದು ಮುಗಿಲು ಮುಟ್ಟಿತ್ತು.

# ಇಟಗಿ : ಕೇಕ್ ಕತ್ತರಿಸಿ ವಿಶ್ವ ಕಾರ್ಮಿಕ ದಿನ ಆಚರಣೆ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆ ರೋಣ ತಾಲೂಕಿನ ಇಟಗಿ ಗ್ರಾಮದಲ್ಲಿ ನರೇಗಾ ಯೋಜನೆಯಡಿ ಬದು ನಿರ್ಮಾಣ ಕಾರ್ಯದಲ್ಲಿ ಕೇಕ್ ಕತ್ತರಿಸುವ ಮೂಲಕ ವಿಶ್ವ ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಯಿತು.

ಮಹಿಳಾ ಕಾಯಕ ಮಿತ್ರರಾದ ಶಿಲ್ಪ ತಳವಾರ, ಅಕ್ಷತಾ ಕುರಿ, ಲಲಿತ ಬಡಿಗೇರ, ಕಾಳಮ್ಮ ಬಡಿಗೇರ, ಶೃತಿ ಮೇಟಿ, ಭೀಮಾಂಬಿಕಾ ರಬ್ಬನಗೌಡರ, ನೇತ್ರಾ ಹಡಪದ, ಶಕಿಲಾಬಾನು ಮುದ್ದಗಲ್ಲ, ಅಕ್ಷತಾ ಯರಗೇರಿ ಸೇರಿ ಗ್ರಾಮದ ನಿಡಗುಂದಿ ರಸ್ತೆಯಲ್ಲಿರುವ ಸುರೇಶ್ ತೆಗಿನಕೇರಿ ಅವರ ಜಮೀನಿನಲ್ಲಿ ಬದು ನಿರ್ಮಾಣ ಕಾರ್ಯದಲ್ಲಿ ತೊಡಗಿದ ಕಾರ್ಮಿಕರಿಗೆ ವಿಶ್ವ ಕಾರ್ಮಿಕರ ದಿನಾಚರಣೆಯ ಶುಭಾಶಯ ಕೋರಿ ಆಚರಿಸಲಾಯಿತು.

ಇಟಗಿ ಗ್ರಾಮ ಪಂಚಯಾತ ಅಭಿವೃದ್ಧಿ ಅಧಿಕಾರಿ ಮಂಜುನಾಥ ಜಾವೂರ ಮಾತನಾಡಿ ಮುಂಬರುವ ವಿಧಾನಸಭೆ ಚುಣಾವನೆಗೆ ಮತದಾನವು ಮೇ 10 ರಂದು ಬೆಳಿಗ್ಗೆ 7 ರಿಂದ ಸಂಜೆ 6 ಗಂಟೆಯವರೆಗೆ ನಡೆಯಲಿದೆ. ತಪ್ಪದೇ ಮತಗಟ್ಟೆಗೆ ಬಂದು ಮತ ಚಲಾಯಿಸಿ ಮತದಾನ ಪ್ರಮಾಣವನ್ನು ಶೇ 100 ರಷ್ಟು ಗುರಿ ಸಾಧನೆಗೆ ಎಲ್ಲರೂ ತಪ್ಪದೇ ಮತ ಚಲಾಯಿಸುವಂತೆ ಕೋರಿದರು. ಇದೇ ಸಂದರ್ಭದಲ್ಲಿ ಗ್ರಾಮ ಪಂಚಾ೦ಯತಿ ಕಾ೦ರ್ಯದರ್ಶಿ ಎನ್.ಬಿ. ಉಗಲಾಟದ, ಹಾಗೂ ಸಿಬ್ಬಂದಿ ಮಾಹಂತೇಶ ಕೋಮಾರ, ಕಂಪ್ಯೂಟರ್ ಆಪರೇಟರ ಮಲ್ಲು ಹೂಗಾರ ಮತ್ತು ಗ್ರಾಮದ ಕಾರ್ಮಿಕರಾದ ಭೀಮಶಿ ಸಜ್ಜನರ ಗುರು ಗವಿಮಠ ರಮೇಶ ಸಂನಾಳ ಮಲ್ಲಿಕಾರ್ಜುನ ಮೇಟಿ ರಾಜೇಸಾಬ ಜಂಗ್ಲಪನವರ ಧರ್ಮಪ್ಪ ವಡಗೇರಿ ನಿಂಗಪ್ಪ

## ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮಂಜುನಾಥ ಗಣಿ ಅಭಿಪ್ರಾಯ

# 'ನರೇಗಾದಲ್ಲಿ ಯೋಜನೆಯಲ್ಲಿ ಕಾರ್ಮಿಕರಿಗಾಗಿ ಅತಿ ಹೆಚ್ಚು ಯೋಜನೆಗಳಿವೆ'



■ವಿಜಯಸಾಕ್ಷಿ ಸುದ್ದಿ, ನರಗುಂದ

ನರೇಗಾ ಯೋಜನೆಯಲ್ಲಿ ಕಾರ್ಮಿಕರಿಗಾಗಿ ಅತಿ ಹೆಚ್ಚು ಯೋಜನೆಗಳಿವೆ. ಈ ಯೋಜನೆಯಡಿ ಕೂಲಿಕಾರರಿಗೆ ಒದಗಿಸುವ ಕೆಲಸಗಳು ಕಾರ್ಮಿಕ ಸ್ನೇಹಿ ವಾತಾವರಣ ಹೊಂದಿವೆ ಎಂದು ಕೊಣ್ಣೂರು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮಂಜುನಾಥ ಗಣಿ ಅಭಿಪ್ರಾಯಪಟ್ಟರು.

ತಾಲೂಕಿನ ಕೊಣ್ಣೂರು ಗ್ರಾಮದಲ್ಲಿ ಸೋಮವಾರ ವಿಶ್ವ ಕಾರ್ಮಿಕ ದಿನಾಚರಣೆಯನ್ನು ನರೇಗಾ ಕೂಲಿಕಾರರ ಜೊತೆಗೆ ಕೇಕ್ ಕತ್ತರಿಸಿ ಆಚರಿಸುತ್ತ ಮಾತನಾಡಿದರು.

ಕೂಲಿಕಾರರ ಕೇಂದ್ರೀಕೃತ ಯೋಜನೆ ಇದಾಗಿದ್ದು, ಇಡೀ ದೇಶಾದ್ಯಂತ ಸಾಮಾನ್ಯ ಕೂಲಿಕಾರರ ಆರ್ಥಿಕ ಜೀವನಕ್ಕೆ ನರೇಗಾ ಯೋಜನೆ ಸಹಾಯಕವಾಗಿದೆ. ಯೋಜನೆಯಡಿ ಕೆಲಸ ಮಾಡುವ ಕೂಲಿಕಾರರಿಗೆ ಕಾಮಗಾರಿ ಸ್ಥಳದಲ್ಲಿ ಆರೋಗ್ಯ ಸಮಸ್ಯೆಗಳು ಉದ್ಭವಿಸಿದರೆ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ಕೊಡಿಸಲಾಗುವುದು. ಆಕಸ್ಮಿಕವಾಗಿ ಯೋಜನೆಯಡಿ ಕೆಲಸ ಮಾಡುವ ಸಂದರ್ಭದಲ್ಲಿ ಕೂಲಿಕಾರರು ಮೃತರಾದರೆ 2 ಲಕ್ಷ ರೂ. ವರೆಗೆ ಪರಿಹಾರ ನೀಡುವ ವ್ಯವಸ್ಥೆ ನರೇಗಾದಲ್ಲಿದೆ. ಕೆಲಸ ಮಾಡುವ ಸಂದರ್ಭದಲ್ಲಿ ಕೂಲಿಕಾರರಿಗೆ ಕುಡಿಯುವ ನೀರಿನ ವ್ಯವಸ್ಥೆ ಮತ್ತು ದಣಿವಾರಿಸಿಕೊಳ್ಳಲು ನೆರಳಿನ ವ್ಯವಸ್ಥೆ ಮಾಡುವುದು ಈ ಯೋಜನೆಯಲ್ಲಿದೆ. ಹೀಗಾಗಿ ಕೂಲಿಕಾರ್ಮಿಕರ ಸ್ನೇಹಿ ವಾತಾವರಣ ನರೇಗಾ ಯೋಜನೆಯಡಿ ಕೆಲಸ ಮಾಡುವ ಕೂಲಿಕಾರನ ಅನುಭವಕ್ಕೆ ಬರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನರೇಗಾ ಕೂಲಿಕಾರರು ಕಾರ್ಮಿಕ ದಿನಾಚರಣೆಗೆ ಸಿದ್ಧಪಡಿಸಿದ ವಿಶೇಷ ಕೇಕ್‌ನ್ನು ಕಾರ್ಮಿಕರೇ ಕತ್ತರಿಸುವ ಮೂಲಕ ಇನ್ನಿತರೆ ಕೂಲಿಕಾರರಿಗೆ ಕೇಕ್ ತಿನಿಸಿ ಶುಭಾಶಯ ಕೋರಿದರು.

ಸ್ಥಳೀಯ ಕಲಾವಿದ ಪ್ರಕಾಶ ಚಂದನ್ನವರ ನೇತೃತ್ವದ ಜೈ ಕಿಸಾನ ತಂಡ ಕಾರ್ಮಿಕರ ಕುರಿತಾದ ಗೀತೆಗಳನ್ನು ಹಾಡುವುದರ ಮೂಲಕ ನರೇಗಾ ಕಾಮಗಾರಿ ಸ್ಥಳದಲ್ಲಿನ ಕಾರ್ಮಿಕ ದಿನಾಚರಣೆಗೆ ಮೆರಗು ತಂದರು. ಕಾರ್ಯಕ್ರಮದಲ್ಲಿ ಕೊಣ್ಣೂರು ಗ್ರಾಮ ಪಂಚಾಯತ ಸಿಬ್ಬಂದಿ ವರ್ಗ, ನರೇಗಾ ಸಿಬ್ಬಂದಿ ವರ್ಗ ಮತ್ತು ಕೂಲಿಕಾರರು ಭಾಗವಹಿಸಿದ್ದರು. ಕೊಣ್ಣೂರು ಗ್ರಾಮ ಪಂಚಾಯತ ಕಂಪ್ಯೂಟರ್ ಆಪರೇಟರ್ ರಮೇಶ ವಾಸನ ವಂದಿಸಿದರು.

# ಸೋಮೇಶ್ವರ ಜಾತ್ರಾ ಮಹೋತ್ಸವ: ಅದ್ದೂರಿ ಕಡುಬಿನ ಕಾಳಗ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಶ್ರೀ ಸೋಮೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದ 2ನೇ ದಿನ ಸೋಮವಾರ ಸಂಜೆ ಅಪಾರ ಭಕ್ತ ಸಮೂಹದ ನಡುವೆ ಅದ್ದೂರಿ ಕಡುಬಿನ ಕಾಳಗ ನೆರವೇರಿತು.



ಕಡುಬಿನ ಕಾಳಗ ಸಂದರ್ಭದಲ್ಲಿ ಸೋಮೇಶ್ವರ ದೇವರ ಉತ್ಸವ ಮೂರ್ತಿಯಿರುವ ಪಲ್ಲಕ್ಕಿಯು ದೇವಸ್ಥಾನದ ಆವರಣದ, ರಥಬೀದಿ ಪ್ರದಕ್ಷಣೆ ಹಾಕಲಾಗುತ್ತದೆ. ಅಲ್ಲಿಂದ ಸೋಮೇಶ್ವರ ಪಾದಗಟ್ಟಿಗೆ ತೆರಳಿ ಅಲ್ಲಿ 5 ಸುತ್ತು ಪ್ರದಕ್ಷಿಣೆಯೊಂದಿಗೆ ಮತ್ತು ದೇವಸ್ಥಾನ ಪ್ರದಕ್ಷಿಣೆ ಹಾಕಲಾಯಿತು. ಈ ವೇಳೆ ಮುಳಗುಂದ ಮನೆತನದವರು ಸಂಪ್ರದಾಯದಂತೆ ಕಡುಬಿನ ಚೂರುಗಳು, ಬೆಂಡು, ಬತ್ತಾಸ, ಬಿಸ್ಕಟ್, ಬೆಲ್ಲ, ಹಣ್ಣು, ಕಲ್ಲುಸಕ್ಕರೆ ಇತ್ಯಾದಿ ಸಿಹಿ ಚೂರುಗಳನ್ನು ಜನ ಸಮೂಹದತ್ತ ಎಸೆದರು. ಸೇರಿದ್ದ ಭಕ್ತರು ಅವುಗಳನ್ನು ಆಯ್ದು ಭಕ್ತಿಯಿಂದ ಆಯ್ದುಕೊಂಡು ಸ್ವೀಕರಿಸಿ ನಮ್ಮ ಬದುಕಿನ ಕಷ್ಟ ಕಾರ್ಪಣ್ಯಗಳು ದೂರಾಗಲಿ ಎಂದು ಪ್ರಾರ್ಥಿಸಿದರು. ನೆರೆದಿದ್ದ ಭಕ್ತರ ಹರ್ಷೋದ್ಗಾರ ಗೈದರು. ಸೋಮೇಶ್ವರ ಜಾತ್ರಾ ಕಮೀಟಿಯವರು, ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್‌ನವರು, ಅರ್ಚಕರು, ಮುಖಂಡರು, ಅಪಾರ ಭಕ್ತರು ಪಾಲ್ಗೊಂಡಿದ್ದರು.

# ಜೆಡಿಎಸ್‌ನ ಪದಾಧಿಕಾರಿಗಳು ಕಾಂಗ್ರೆಸ್ಸಿಗೆ ಸೇರ್ಪಡೆ



■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಜೆಡಿಎಸ್‌ನ ಪ್ರಮುಖ ಪದಾಧಿಕಾರಿಗಳಾದ ಶಿವನಗೌಡ ಪಾಟೀಲ, ವಿಠಲ ಕಲಬುರ್ಗಿ, ಮಹೇಂದ್ರ ಮೇಹರವಾಡೆ, ಅಕ್ರಮಖಾನ ಮಸೂತಿ, ಮೆಹಬೂಬಸಾಬ ನದಾಫ ಹಾಗೂ ಆಸೀಫ್ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು.

ವಾರ್ಡ ನಂ.21, 23, 25 ಕ್ಕೆ ಸೇರಿದ ಈ ಧುರೀಣರು ರೈತ ನಾಯಕ ಪರಮೇಶ್ವರಪ್ಪ ಜಂತ್ಲಿ ಅವರ ನಿವಾಸದಲ್ಲಿ ಜರುಗಿದ ಸಭೆಯಲ್ಲಿ ಹಿರಿಯರಾದ ಪರಮೇಶ್ವರಪ್ಪ ಜಂತ್ಲಿ, ನಗರಸಭೆ ಸದಸ್ಯರಾದ ಚುಮ್ಮಿ ನದಾಫ್‌ನ ನೇತೃತ್ವದಲ್ಲಿ ಪಕ್ಷಕ್ಕೆ ಸೇರ್ಪಡೆಯಾದರು. ಮಾಜಿ ಶಾಸಕ ಡಿ.ಆರ್. ಪಾಟೀಲರು ಈ ಧುರೀಣರನ್ನು ಶಾಲು ಹಾಕಿ ಕಾಂಗ್ರೆಸ್ ಪಕ್ಷಕ್ಕೆ ಸ್ವಾಗತಿಸಿದರು.

ಮಾಜಿ ಶಾಸಕ ಡಿ.ಆರ್. ಪಾಟೀಲರು ಮಾತನಾಡಿ ಯಾವುದೇ ರಾಗ, ದ್ವೇಷ, ಜಾತಿ, ಮತ, ಪಂಥವಿಲ್ಲದೇ ಪ್ರತಿ ಜೀವಾತ್ಮದಲ್ಲಿ ಶಿವನನ್ನು ಕಂಡು, ಜನರ ಸೇವೆಯೇ ಶಿವನ ಸೇವೆ ಎಂದು ತಿಳಿದು ಕೆಲಸ ಮಾಡೋಣ ಎಂದರು.

ಮಲ್ಲಿಕಾರ್ಜುನಯ್ಯ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು.

ಹಿರಿಯರಾದ ನಾಗಪ್ಪ ಗುಗ್ಗರಿ, ವಿರುಪಾಕ್ಷಪ್ಪ ಅಕ್ಕಿ, ನಿಂಗಪ್ಪ ಜಂತ್ಲಿ, ಸಿದ್ಧಣ್ಣ ಕುಲಕರ್ಣಿ, ಜಾಕೀರ ಕುನ್ನಿಭಾವಿ, ಪರಪ್ಪ ಕಮತರ, ಬಸವರಾಜ ಗುಡದುರ, ರವಿ ಹುಡೇದ, ಬಸವರಾಜ ಕವಳಿಕಾಯಿ, ಕರಬಸಯ್ಯ ನಾಲ್ವತ್ತಮಠ, ಕಳಕಪ್ಪ ರೇವಡಿ, ಮಂಜು ಅಗ್ಗದ, ಶಿವಪ್ಪ ಕುರಿ, ಖಾಜಾಸಾಬ ಕೊಪ್ಪಳ, ಬಸಪ್ಪ ಕಲ್ಲಬಂಡಿ, ರುದ್ರಪ್ಪ ಕಲ್ಲಬಂಡಿ, ಆನಂದ ಜೋಗಾಡಿ, ಬಸವರಾಜ ತುಪ್ಪದ, ಸೋಮು ಮುಳಗುಂದ, ರೈತ ಮುಖಂಡರು ಹಾಗೂ ವಾರ್ಡಿನ ಗುರು ಹಿರಿಯರು, ಯುವ ಮುಖಂಡರು ಉಪಸ್ಥಿತರಿದ್ದರು.

# 'ಜೆಡಿಎಸ್‌ಗೆ ಮತ ನೀಡಿ ಸೇವೆ ಸಲ್ಲಿಸಲು ಅವಕಾಶ ಕೊಡಿ'

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಗೆದ್ದು ಅಧಿಕಾರಕ್ಕೆ ಬಂದ ಕೂಡಲೇ ಪಂಚರತ್ನ ಯೋಜನೆಗಳು ಜಾರಿಯಾಗಲಿವೆ ಎಂದು ರೋಣ ಮತಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಮುಕ್ತುಮಸಾಬ ಮುಧೋಳ(ಸಾಗರ) ಹೇಳಿದರು.



ಪಟ್ಟಣದ 17 ವಾರ್ಡ್‌ಗಳಲ್ಲಿ ಸೋಮವಾರ ಜೆಡಿಎಸ್ ಪಕ್ಷದ ಮನೆ ಮನೆ ಪ್ರಚಾರದಲ್ಲಿ ಅವರು ಮಾತನಾಡಿದರು.

ಮಾಜಿ ಮುಖ್ಯಮಂತ್ರಿ ಎಚ್.ಡಿ ಕುಮಾರಸ್ವಾಮಿ ದೀನದಲಿತರಿಗಾಗಿ ವಿವಿಧ ಯೋಜನೆಗಳನ್ನು ರೂಪಿಸಿ ಜನರ ವಿಶ್ವಾಸ ಗಳಿಸಿದ್ದಾರೆ. ಈ ಬಾರಿ ಚುನಾವಣೆಯಲ್ಲಿ ಜೆಡಿಎಸ್ ಪಕ್ಷಕ್ಕೆ ಮತ ನೀಡಿ ನಿಮ್ಮ ಸೇವೆ ಸಲ್ಲಿಸಲು ಅವಕಾಶ ಕೊಡಿ ಎಂದು ಮನವಿ ಮಾಡಿದರು.

ಈ ವೇಳೆ ರಾಜ್ಯ ಮಹಿಳಾ ಪ್ರಧಾನ ಕಾರ್ಯದರ್ಶಿ ಪ್ರಿಯಾಮಣಿ, ಗದಗ ಜಿಲ್ಲಾ ಎಸ್.ಟಿ ಘಟಕದ ಅಧ್ಯಕ್ಷ ಪರಶುರಾಮ ಹಿರೇಮನಿ, ಜಿಲ್ಲಾ ಕಾರ್ಯಾಧ್ಯಕ್ಷ ಎಂ.ಆರ್ ಸೊಂಪೂರ, ರಮೇಶ ಕಲಬುರ್ಗಿ, ತಾಲೂಕ ಉಪಾಧ್ಯಕ್ಷ ವೀರಪ್ಪ ಜಿರ್ಲ, ಸಾಧಿಕ್ ಮುಧೋಳ, ಸಂಗಪ್ಪ ಯಲಬುಂಚಿ, ಪ್ರಜ್ವಲ್ ಹುನಗುಂದ, ಅಲಿ ಮುಧೋಳ, ರಾಜು ಪವಾರ ಸೇರಿದಂತೆ ಜೆಡಿಎಸ್ ಮಹಿಳಾ ಕಾರ್ಯಕರ್ತರಿದ್ದರು.

## ನಮ್ಮ ನಡೆ, ಮತಗಟ್ಟೆ ಕಡೆ ಜಾಥಾ

# ಮತದಾನದ ದಿನ ತಪ್ಪದೇ ನಿಮ್ಮ ಹಕ್ಕು ಚಲಾಯಿಸಿ

■ವಿಜಯಸಾಕ್ಷಿ ಸುದ್ದಿ, ರೋಣ

ಎಲ್ಲ ಮತದಾರರು ತಮ್ಮ ಮತಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮೇ 10 ರಂದು ನಡೆಯುವ ಮತದಾನದ ದಿನ ತಪ್ಪದೆ ನಿಮ್ಮ ಹಕ್ಕು ಚಲಾಯಿಸಿ. ಅಲ್ಲದೇ ಚುನಾವಣಾ ಅಕ್ರಮಗಳಿಗೆ ಸಂಬಂಧಿಸಿದ ದೂರುಗಳನ್ನು ನೀಡಬೇಕು ಹಾಗೂ ಸುಲಲಿತ ಹಾಗೂ ನ್ಯಾಯಬದ್ಧ ಚುನಾವಣೆಗಾಗಿ ಚುನಾವಣಾ ಆಯೋಗ ನೀಡಿರುವ ಓಟರ್ ಹೆಲ್ಪ್‌ಲೈನ್, ಸಕ್ಷಾಮ್ ಆ್ಯಪ್, ಸಿವಿಜಿಲ್ ಆ್ಯಪ್‌ಗಳನ್ನು ಬಳಸಿ ನೈತಿಕ ಮತದಾನಕ್ಕೆ ಸಹಕರಿಸಬೇಕು ಎಂದು ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿಗಳಾದ ರವಿ ಎ.ಎನ್ ಹೇಳಿದರು.



80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಹಾಗೂ ವಿಶೇಷ ಚೇತನರಿಗೆ ಮನೆಯಿಂದಲೇ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿದೆ. ಮತದಾನದ ಪ್ರಮಾಣವನ್ನು ಹೆಚ್ಚಿಸಲು ಮತದಾನ ಜಾಗೃತಿ ಜಾಥಾದಂತಹ ಅನೇಕ ಕಾರ್ಯಕ್ರಮಗಳನ್ನು ಸ್ವೀಪ್ ಸಮಿತಿಯಿಂದ ಹಮ್ಮಿಕೊಳ್ಳಲಾಗುತ್ತಿದೆ. ಎಲ್ಲರೂ ನಿರ್ಭೀತಿಯಿಂದ ಮತ ಚಲಾಯಿಸಿ ಎಂದರು.

ವಿಧಾನಸಭಾ ಚುನಾವಣೆ ಅಂಗವಾಗಿ ರವಿವಾರ ಪಟ್ಟಣದ ಸೂಡಿ ಕ್ರಾಸ್‌ನಿಂದ ಪೋತರಾಜನ ಕಟ್ಟೆ ಕಡೆಗೆ ಮತದಾನ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಧರ್ಮ, ಜನಾಂಗ, ಜಾತಿ, ಮತ, ಭಾಷೆ ಅಥವಾ ಯಾವುದೇ ಪ್ರೇರೇಪಣೆಗಳ ದಾಕ್ಷಿಣ್ಯಗಳಿಗೆ ಪ್ರಭಾವಿತರಾಗದೇ ವಿವೇಚನೆಯಿಂದ ಮತ ಚಲಾಯಿಸಿ. ಆ ಮುಖಾಂತರ ಪ್ರಜಾಪ್ರಭುತ್ವವನ್ನು ಗೆಲ್ಲಿಸೋಣ. ಪ್ರಜಾಪ್ರಭುತ್ವ ಗಟ್ಟಿಗೊಳಿಸಲು ಕಡ್ಡಾಯವಾಗಿ ಮತದಾನ ಮಾಡಿ ಎಂದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಮುಂಭಾಗದಲ್ಲಿ ನಮ್ಮ ನಡೆ ಮತಗಟ್ಟೆ ಕಡೆ ಕಾರ್ಯಕ್ರಮದಡಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ರವಿ ಎ.ಎನ್ ಸಮ್ಮುಖದಲ್ಲಿ ಧ್ವಜಾರೋಹಣವನ್ನು ರೋಣ ವಿಧಾನಸಭಾ ಚುನಾವಣಾ ಅಧಿಕಾರಿ ಪ್ರಶಾಂತ ವರಗಪ್ಪನವರ ನೇರವೇರಿಸಿದರು.

ರೋಣ ವಿಧಾನಸಭಾ ಚುನಾವಣಾ ಅಧಿಕಾರಿ ಪ್ರಶಾಂತ ವರಗಪ್ಪನವರ ಮತದಾನ ಕುರಿತು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಮುಂಭಾಗದಲ್ಲಿ ಪ್ರತಿಜ್ಞಾ ವಿಧಿಯನ್ನು ಸಾರ್ವಜನಿಕರಿಗೆ ಬೋಧಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಹಾಗೂ ಸಿಬ್ಬಂದಿಗಳು ತಾಲೂಕು ಪಂಚಾಯತ ಸಿಬ್ಬಂದಿಗಳು, ಶಿಶು ಅಭಿವೃದ್ಧಿ ಕಚೇರಿ ಸಿಬ್ಬಂದಿಗಳು ಸೇರಿದಂತೆ ತಾಲೂಕಿನ ಅಂಗನವಾಡಿ ಕಾರ್ಯಕರ್ತರು ಭಾಗವಹಿಸಿದ್ದರು.

# ಜಕ್ಕಲಿಯಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದ ಧುರೀಣರು

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ



ಬಿಜೆಪಿ ಸರಕಾರದ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ರವಿವಾರ ಅಂದಾನಪ್ಪ ದೊಡ್ಡಮೇಟಿ ಕುಟುಂಬದವರನ್ನೊಳಗೊಂಡಂತೆ ಜಕ್ಕಲಿಯ ನೂರಾರು ಜನರು ಬಿಜೆಪಿಯನ್ನು ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಕಾಂಗ್ರೆಸ್ ಧುರೀಣ ಐ.ಎಸ್. ಪಾಟೀಲ ಅವರೆಲ್ಲರನ್ನೂ ಪಕ್ಷಕ್ಕೆ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಚನ್ನಬಸವ ದೊಡ್ಡಮೇಟಿ ಬಹಳ ನಿರೀಕ್ಷೆಗಳನ್ನಿಟ್ಟುಕೊಂಡು ನಾವು ಬಿಜೆಪಿಗೆ ದುಡಿದಿದ್ದೆವು. ನಮಗೆ ಭ್ರಮನಿರಸನವಾಗಿದೆ. ನಮ್ಮ ಅಜ್ಜ ದಿ. ಅಂದಾನಪ್ಪ ದೊಡ್ಡಮೇಟಿಯವರ ಕನಸು ನನಸಾಗಲಿಲ್ಲ. ನಮ್ಮ ಅಜ್ಜ ಚಿತ್ರಿಸಿದ ಭುವನೇಶ್ವರಿ ಚಿತ್ರವನ್ನು ಈ ಸರಕಾರ ರಾಜ್ಯದ ಲಾಂಛನವಾಗಿಸಲಿಲ್ಲ. ಗ್ರಾಮದ ಸಮಸ್ಯೆಗಳಿಗೆ ಶಾಸಕರಿಂದ ಸಕಾರಾತ್ಮಕ ಪ್ರತಿಕ್ರಿಯೆ ದೊರಕದೆ ಇರುವುದರಿಂದ ಕಾಂಗ್ರೆಸ್ ಪಕ್ಷವನ್ನು ಸೇರುತ್ತಿದ್ದೇವೆ ಎಂದರು.

ನಿವೃತ್ತ ಶಿಕ್ಷಕ ಎಂ.ಎಸ್. ದಢೇಸೂರಮಠ, ತಾ.ಪಂ. ಮಾಜಿ ಸದಸ್ಯ ಮಲ್ಲಣ್ಣ ಮೇಟಿ ಮಾತನಾಡಿದರು. ಸಭೆಯನ್ನುದ್ದೇಶಿಸಿ ತಾ. ಪಂ. ಮಾಜಿ ಸದಸ್ಯ ಸಂದೇಶ ದೊಡ್ಡಮೇಟಿ, ಶಶಿಧರ ಹೊಟ್ಟಿನ ಇನ್ನೂ ಮುಂತಾದವರು ಮಾತನಾಡಿದರು. ಅಧ್ಯಕ್ಷತೆಯನ್ನು ಶರಣಪ್ಪ ಪಟ್ಟಣಶೆಟ್ಟಿ ವಹಿಸಿದ್ದರು.

ಕಾಂಗ್ರೆಸ್ ಧುರೀಣ ಐ. ಎಸ್. ಪಾಟೀಲ ಪಕ್ಷಕ್ಕೆ ಸೇರಿದವರೆಲ್ಲರನ್ನೂ ಸ್ವಾಗತಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಧುರೀಣರಾದ ವೆಂಕಣ್ಣ ಬಂಗಾರಿ, ಅಕ್ಷಯ ಪಾಟೀಲ, ತಾ.ಪಂ. ಮಾಜಿ ಅಧ್ಯಕ್ಷ ಪ್ರಭು ಮೇಟಿ, ಅಶೋಕ ಗಡಗಿ, ಹನಮಂತಪ್ಪ ಗಡಗಿ, ಆರ್.ಬಿ. ವಾಲಿ, ವೀರಪ್ಪ ಅಕ್ಕಿಶೆಟ್ಟರ, ಅಂದಪ್ಪ ಹೂಗಾರ, ಶರಣಪ್ಪ ಕುರಡಗಿ, ಸುಭಾಸ ಕೆಳಗಡಿ, ಅಶೋಕಪ್ಪ ಯಾವಗಲ್ಲ, ವರ್ಷಾ ಪಾಟೀಲ, ಶ್ರುತಿ ಪಾಟೀಲ, ಎಂ.ಎಸ್. ಕೋರಿ, ಗ್ರಾಮ ಪಂಚಾಯತಿ ಅಧ್ಯಕ್ಷ ಸಂತೋಷ ಕೋರಿ, ಫಕೀರಪ್ಪ ಮಾದರ, ಯಮನೂರಸಾಬ ನದಾಫ್, ಚನ್ನಪ್ಪ ಮಡಿವಾಳರ, ಬಸವರಾಜ ಆದಿ, ಹನುಮಪ್ಪ ಜಂಗಣ್ಣವರ, ಮುತ್ತಣ್ಣ ತೋಟದ, ಪರಸಪ್ಪ ತುರಾಯದ ಇನ್ನೂ ಅನೇಕ ಮುಖಂಡರು ಇದ್ದರು.

# ಪುಲಿಗೆರೆ ಶ್ರೀ ಸೋಮೇಶ್ವರ ಮಹಾರಥೋತ್ಸವ ಸಂಪನ್ನ



■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಆರಾಧ್ಯದೈವ ಪುಲಿಗೆರೆಯ ಶ್ರೀ ಸೋಮೇಶ್ವರ ದೇವಸ್ಥಾನದ ಜಾತ್ರಾಮಹೋತ್ಸವದ ನಿಮಿತ್ತ ಭಾನುವಾರ ಗೋಧೂಳಿ ಸಮಯದಲ್ಲಿ ಅಪಾರ ಭಕ್ತ ಸಮೂಹದ ನಡುವೆ ಶ್ರೀ ಸೋಮೇಶ್ವರ ಮಹಾರಥೋತ್ಸವ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಜಾತ್ರಾಮಹೋತ್ಸವ ಅಂಗವಾಗಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅಲಂಕಾರ ಮಾಡಲಾಗಿತ್ತು. ಬೆಳಗಿನಿಂದಲೇ ಮಹಿಳೆಯರು, ಮಕ್ಕಳು ಹೊಸ ಉಡುಗೆ ಧರಿಸಿ ದೇವಸ್ಥಾನಕ್ಕೆ ಆಗಮಿಸಿ ಶ್ರೀ ಸೋಮೇಶ್ವರನಿಗೆ ಶ್ರದ್ಧಾ-ಭಕ್ತಿಯಿಂದ ನಮಿಸಿದರು. ಬಳಿಕ ರಥಕ್ಕೆ ಉಡಿ ತುಂಬಿ, ಹೊಸ ವಸ್ತ್ರಾಭರಣಗಳನ್ನಿರಿಸಿ ಪೂಜಿಸಿ ಕೃತಾರ್ಥರಾದರು.

ಸಂಜೆ ಅಪಾರ ಭಕ್ತ ಸಮೂಹದೊಂದಿಗೆ ಜರುಗಿದ ಶ್ರೀ ಸೋಮೇಶ್ವರನ ಮಹಾರಥೋತ್ಸವಕ್ಕೆ ನಾಡಿನಾದ್ಯಂತ ಆಗಮಿಸಿದ್ದ ಭಕ್ತಗಣ ಸಾಕ್ಷಿಯಾಗಿತ್ತು. ಯುವಕರು ತೇರಿನ ಕಳಸಕ್ಕೆ ಗುರಿಯಿಟ್ಟು ಹಣ್ಣು, ಉತ್ತತ್ತಿ ಎಸೆಯುತ್ತಿದ್ದ ದೃಶ್ಯ ಕಂಡು ಬಂದಿತು. ನವ ದಂಪತಿಗಳು ತೇರಿನ ಕಳಸ ನೋಡಲು ಜಮಾಯಿಸಿದ್ದರು. ಮಹಾರಥೋತ್ಸವದ ಸಂದರ್ಭದಲ್ಲಿ ಶ್ರೀ ಸೋಮೇಶ್ವರ ದೇವಸ್ಥಾನದ ಜಾತ್ರಾ ಕಮಿಟಿ, ಸೇವಾ ಸಮಿತಿಯ ಸರ್ವ ಸದಸ್ಯರು, ಮುಖ್ಯ ಅರ್ಚಕರು, ಹಿರಿಯರು ನೇತೃತ್ವ ವಹಿಸಿದ್ದರು.

ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಶನಿವಾರ ಸಂಜೆ ಲಕ್ಷ್ಮೀದೇವಿ ಪೂಜೆ, ರಥಪೂಜೆ ಮತ್ತು ಸುಮಂಗಲಿಯರಿಗೆ ಉಡಿ ತುಂಬುವ ಕಾರ್ಯಕ್ರಮ ನೆರವೇರಿತು. ಸೋಮವಾರ ಸಂಜೆ 5.30ಕ್ಕೆ ಕಡುಬಿನ ಕಾಳಗ ನೆರವೇರಿತು. ಇಂದು, ಮಂಗಳವಾರ ಓಕುಳಿ ಕಾರ್ಯಕ್ರಮದೊಂದಿಗೆ ಜಾತ್ರೆ ಸಂಪನ್ನಗೊಳ್ಳಲಿದೆ.

**ಕುರ್ತಕೋಟಿ ಗ್ರಾಮದಲ್ಲಿ ಹಿತೈಷಿಗಳ ಸಭೆಯನ್ನುದ್ದೇಶಿಸಿ ಮಾತನಾಡಿದ ಎಚ್.ಕೆ. ಪಾಟೀಲ**

# ಸದೃಢ ಸಮಾಜ ಕಟ್ಟಲು ಎಲ್ಲರೂ ಒಂದಾಗಿ ನಡೆಯಬೇಕು

■ ವಿಜಯಸಾಕ್ಷಿ ಸುದ್ದಿ, ಗದಗ



ನನ್ನ ಸಾರ್ವಜನಿಕ ಜೀವನದಲ್ಲಿ ಜನತೆ ನೀಡಿದ ರಾಜಕೀಯ ಶಕ್ತಿಯನ್ನು ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಹಾಗೂ ಎಲ್ಲರ ಸೇವೆಗೆ ಅಸ್ತ್ರವಾಗಿ ಬಳಸುವೆ. ಆ ನಿಟ್ಟಿನಲ್ಲಿ ಸದೃಢ ಸಮಾಜ ಕಟ್ಟಲು ಎಲ್ಲರೂ ಒಂದಾಗಿ ನಡೆಯುವ ಚಿಂತನೆ ಮಾಡಬೇಕು ಎಂದು ಗದಗ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಚ್.ಕೆ. ಪಾಟೀಲರು ಹೇಳಿದರು.

ಕುರ್ತಕೋಟಿ ಗ್ರಾಮದಲ್ಲಿ ಭಾನುವಾರ ಜರುಗಿದ ಹಿತೈಷಿಗಳ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ಗ್ರಾಮೀಣ ಭಾಗಗಳು ಹೆಚ್ಚು ಹೆಚ್ಚು ಅಭಿವೃದ್ಧಿಯಾಗಬೇಕು. ಆರೋಗ್ಯವಂತ ಸಮಾಜ ಕಟ್ಟಲು, ಗ್ರಾಮೀಣ ಜನರ ಬದುಕಿನ ಗುಣಮಟ್ಟ ಹೆಚ್ಚಿಸಲು ಪ್ರತಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ, ಗೌರವ ಘಟಕ ನಿರ್ಮಾಣ, ನಮ್ಮ ಹೊಲ ನಮ್ಮ ರಸ್ತೆ ನಿರ್ಮಾಣ, ರೈತರ ಕಣ, ಗ್ರಂಥಾಲಯ, ಜಿಮ್ ಸೇರಿದಂತೆ ಯುವಕರಿಗೆ, ರೈತರಿಗೆ ಅನುಕೂಲವಾಗುವ ಎಲ್ಲ ಯೋಜನೆಗಳನ್ನು ಜಾರಿಗೆಗೊಳಿಸಲಾಗಿತ್ತು ಎಂದರು.

ಸಭೆಗೂ ಮುನ್ನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರ ಮೂರ್ತಿಗೆ ಮಾಲಾರ್ಪಣೆ ಮಾಡಿ, ತೆರೆದ ವಾಹನದಲ್ಲಿ ಸಾವಿರಾರು ಕಾರ್ಯಕರ್ತರ ನಡುವೆ ರೋಡ್ ಶೋ ನಡೆಸಲಾಯಿತು. ಮಾಜಿ ಶಾಸಕ ಡಿ.ಆರ್. ಪಾಟೀಲ, ಫಕೀರಪ್ಪ ಹೆಬಸೂರ, ರೇವಣಪ್ಪ ಕೊಂಡಿಕೊಪ್ಪ, ಹನಮಂತಗೌಡ ಹಿರೇಗೌಡ್ರ, ಅಪ್ಪಣ್ಣ ಇನಾಮತಿ, ವಾಯ್.ಡಿ. ತಳವಾರ ವಕೀಲರು, ಶಿವಾನಂದ ಮಾದಣ್ಣವರ, ಗಿರೀಶ ಡಬಾಲಿ, ಜಿ.ಎನ್. ಪಾಟೀಲ, ಶಿವಣ್ಣ ಹೊಸಮನಿ, ಶಿದ್ದಯ್ಯ ವಿಭೂತಿಮಠ, ಶೆಖರಯ್ಯ ಹೊಸಮಠ, ವಿರುಪಣ್ಣ ಹೊಸಮನಿ, ಶಿವಪುತ್ರಪ್ಪ ಕಪ್ಪರಶೆಟ್ರ, ಸಿದ್ದಪ್ಪ ಪೂಜಾರ, ಚನ್ನವೀರಪ್ಪ ಜಕ್ಕಲಿ, ಪ್ರಭಪ್ಪ ಗಾಣಿಗೇರ, ನಿಂಗಪ್ಪ ವಡ್ಡರ, ಮುದಕಣ್ಣ ಮುಲಿಮನಿ, ಭರಮಪ್ಪ ಹುಣಸಿಮರದ, ಮರಬಸಪ್ಪ ದಿಂಡೆಣ್ಣವರ, ಮುದಕಣ್ಣ ಬಡಿಗೇರ, ಮುತ್ತಣ್ಣ ಈಳಿಗೇರ, ರಂಜಾನಸಾಬ ನದಾಫ, ವಿರಪಣ್ಣ ನರಗುಂದ ಮುಂತಾದವರು ಭಾಗವಹಿಸಿದ್ದರು.

# 27ನೇ ವಾರ್ಡ್ ವ್ಯಾಪ್ತಿಯಲ್ಲಿ ಅನಿಲ್ ಮೆಣಸಿನಕಾಯಿ ಪರ ಪ್ರಚಾರ

■ ವಿಜಯಸಾಕ್ಷಿ ಸುದ್ದಿ, ಗದಗ



ನಗರದ 27ನೇ ವಾರ್ಡನಲ್ಲಿ ಬಿಜೆಪಿ ಅಭ್ಯರ್ಥಿ ಅನಿಲ ಮೆಣಸಿನಕಾಯಿ ಪರವಾಗಿ ಬಿಜೆಪಿ ಮುಖಂಡ ಸಿದ್ದಲಿಂಗೇಶ ಮೆಣಸಿನಕಾಯಿ ಮತ ಯಾಚಿಸಿದರು. ಜನರು ಈ ಬಾರಿಯ ಚುನಾವಣೆಯ ಸಂದರ್ಭದಲ್ಲಿ ಜಾಗೃತರಾಗಿದ್ದಾರೆ. ಯಾವುದು ನಿಜ, ಯಾವುದು ಸುಳ್ಳು, ಯಾವ ಪಕ್ಷ ಅಧಿಕಾರಕ್ಕೆ ಬಂದರೆ ರಾಜ್ಯದ ಕಲ್ಯಾಣವಾಗಲಿದೆ ಎಂಬ ಅಂಶಗಳನ್ನು ಅರಿತಿದ್ದಾರೆ. ಗದಗ ಮತಕ್ಷೇತ್ರದ ಅಭಿವೃದ್ಧಿಗಾಗಿ ಅನಿಲ್ ಮೆಣಸಿನಕಾಯಿಯವರನ್ನು ಬೆಂಬಲಿಸಿ ಎಂದು ಪ್ರಚಾರ ಕೈಗೊಂಡು ಮತದಾರರಲ್ಲಿ ವಿನಂತಿಸಿದರು. ಬಿಜೆಪಿ ಮುಖಂಡರಾದ ರಾಜು ಕುರಡಗಿ, ಅಶೋಕ ಸಂಕಣ್ಣವರ, ಅಯ್ಯಪ್ಪ ಅಂಗಡಿ ಮತ್ತಿತರರು ಮನೆ ಮನೆ ಪ್ರಚಾರ ನಡೆಸಿದರು. ಇದೇ ಸಂದರ್ಭದಲ್ಲಿ ಮುಖಂಡ ರಾಜು ಕುರಡಗಿ ಅವರ ಜನ್ಮದಿನವನ್ನು ಆಚರಿಸಲಾಯಿತು.

**ವೃದ್ಧಾಶ್ರಮಕ್ಕೆ ನೀಡಿ ಮಾನವೀಯತೆ ಮರೆದ ಲಕ್ಷ್ಮೇಶ್ವರದ ಕೋಲ್ಡ್ರಿಂಕ್ಸ್ ವ್ಯಾಪಾರಿ**

# 'ನಷ್ಟ ಪರಿಹಾರದ ಹೆಚ್ಚುವರಿ ಹಣ ನನಗೆ ಬೇಡ'

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ವಿಧಾನಸಭಾ ಚುನಾವಣೆ ಪ್ರಚಾರಾರ್ಥ ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಏ. 28 ರಂದು ಸಾರ್ವಜನಿಕ ಸಮಾವೇಶ ನಡೆದ ಸಂದರ್ಭದಲ್ಲಿ ಸೇರಿದ್ದ ಜನರು ಕುಡಿಯುವ ನೀರಿಗಾಗಿ ಪರದಾಡುವುದನ್ನು ಮನಗಂಡ ಸಂಘಟಕರು ನೀರಿನ ವ್ಯವಸ್ಥೆಗೆ ಮುಂದಾದರು. ಈ ವೇಳೆ ಯುವಕನೋರ್ವ ಗೂಡ್ಸ್ ವಾಹನದಲ್ಲಿ ನೀರು, ಕೂಲ್ ಡ್ರಿಂಕ್ಸ್ ಮಾರಾಟಕ್ಕೆ ಬಂದಿದ್ದ. ಆದರೆ ಸೇರಿದ್ದ ಜನರು ಸಂಘಟಕರೇ ಉಚಿತವಾಗಿ ವಿತರಿಸಲು ತರಿಸಿದ್ದಾರೆ ಎಂದು ಮುಗಿಬಿದ್ದು ನೀರು, ಕೋಲ್ಡ್ರಿಂಕ್ಸ್ ಬಾಟಲಿ ಕಿತ್ತುಕೊಂಡರು. ಕೆಲವರು ಇದನ್ನು ಮನಗಂಡು ತಡೆಯಲು ಪ್ರಯತ್ನಿಸಿದರೂ ಅಷ್ಟೊತ್ತಿಗೆ ಬಹುತೇಕ ಬಾಟಲಿಗಳು ಖಾಲಿಯಾಗಿದ್ದವು.

ಅಸಹಾಯಕನಾದ ಯುವಕ ತನಗಾದ ನಷ್ಟದಿಂದ ಅಳುತ್ತಾ ಗೋಳಾಡಿದನು. ಈ ದೃಶ್ಯವು ವಿವಿಧ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತು.

ಸತ್ಯಾಸತ್ಯತೆ ಅರಿತ ಸಂಸದ ಪ್ರತಾಪ್ ಸಿಂಹ ಯುವಕ ಸಮೀರ್ ಹಸನ್ ಸಾಬನನ್ನು ಮಾತನಾಡಿಸಿ "ಸಾರಿ ಬ್ರದರ್" ಎಂದು ಹೇಳಿ ಆತನ ಖಾತೆಗೆ ಏ. 30 ರಂದು 35,000 ರೂ. ಜಮೆ ಮಾಡಿದರು. ಈ ವಿಷಯವನ್ನು ಪ್ರತಾಪ್ ಸಿಂಹ ಮತ್ತು ಆತನ ಅಭಿಮಾನಿಗಳು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ.

> ಸಂಸದ ಪ್ರತಾಪ್ ಸಿಂಹ ಅವರು ಹಣ ಪಾವತಿಸುವ ಮೂಲಕ ಮಾನವೀಯತೆ ಮೆರೆದಿರುವ ಬಗ್ಗೆ ಸಮೀರ್ ಹಸನ್‌ಸಾಬನನ್ನು ಸಂಪರ್ಕಿಸಲಾಗಿ ನನಗೆ ಆದ ನಷ್ಟಕ್ಕೆ ಸಂಸದ ಪ್ರತಾಪ್ ಸಿಂಹ ಅವರು ಹಣ ನೀಡಿರುವುದು ಖುಷಿಯಾಗಿದೆ. ಘಟನೆಯ ವಿಡಿಯೋ ಮಾಧ್ಯಮಗಳಲ್ಲಿ ಪ್ರಸಾರವಾದ ಹಿನ್ನೆಲೆ ಅಂದೇ ರಾತ್ರಿ ಕಾಂಗ್ರೆಸ್‌ನವರೂ ನನಗೆ 20 ಸಾವಿರ ರೂ. ಹಣ ಕೊಟ್ಟಿದ್ದಾರೆ ಮತ್ತು ಬಿಜೆಪಿಯವರೂ ಕೊಡಿಸುತ್ತೇವೆ ಎಂದು ಭರವಸೆ ನೀಡಿದ್ದರು. ಈಗ ಪ್ರತಾಪ್‌ಸಿಂಹ ಅವರು ನನಗೆ 35,000 ರೂ. ಜಮೆ ಮಾಡಿದ್ದಾರೆ. ಇದೀಗ ನನಗೆ ನಷ್ಟಕ್ಕಿಂತಲೂ ಹೆಚ್ಚು ಹಣ ಬಂದಿದ್ದು ಹೆಚ್ಚುವರಿ ಹಣವನ್ನು ನಾನು ವೃದ್ಧಾಶ್ರಮಕ್ಕೆ ಕೊಡುತ್ತೇನೆ ಎಂದು ಮಾನವೀಯತೆ ಮೆರೆದಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

**ಸಂಸ್ಕೃತಿ-ಸಂಸ್ಕಾರ ಶಿಬಿರ ಸಮಾರೋಪ ಸಮಾರಂಭ**

# 'ಸೃಜನಶೀಲ ಮಕ್ಕಳು ಸಶಕ್ತ ಸಮಾಜ ನಿರ್ಮಾಪಕರು'



■ ವಿಜಯಸಾಕ್ಷಿ ಸುದ್ದಿ, ಗದಗ

ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು ಎಂಬಂತೆ ಬಿತ್ತಿದ ಬೀಜ ಸರಿಯಾಗಿ ಮೊಳಕೆಯೊಡೆದು ಬೆಳೆದರೆ ಫಸಲು ಚೆನ್ನಾಗಿ ಬರುತ್ತದೆ. ಹೀಗೆಯೇ ಮಕ್ಕಳು ದೈಹಿಕ, ಮಾನಸಿಕ ಮತ್ತು ನೈತಿಕವಾಗಿ ಸದೃಢರಾಗಿ ಬೆಳೆದರೆ ಅವರಲ್ಲಿ ಕ್ರಿಯಾಶೀಲ, ಸೃಜನಶೀಲ ಗುಣಸ್ವಭಾವಗಳು ಹೆಚ್ಚುವವು. ಇವುಗಳಿಂದ ಅವರು ಏನಾದರೂ ಹೊಸತನ್ನು ನಿರ್ಮಿಸಲು ಸಜ್ಜಾಗುವರು. ಈ ನಿಟ್ಟಿನಲ್ಲಿ ಸೃಜನಶೀಲ ಮಕ್ಕಳು ಸಶಕ್ತ ಸಮಾಜ ನಿರ್ಮಾಪಕರಾಗುವರೆಂದು ಖ್ಯಾತ ವೈದ್ಯ ಮತ್ತು ಜಗದ್ಗುರು ತೋಂಟದಾರ್ಯ ಜಾತ್ರಾಮಹೋತ್ಸವ ಸಮಿತಿಯ ಅಧ್ಯಕ್ಷರಾದ ಡಾ. ಎಸ್. ಬಿ. ಶೆಟ್ಟರ ಹೇಳಿದರು. ಎಸ್. ವಾಯ್.ಬಿ.ಎಂ.ಎಸ್. ಯೋಗ ಪಾಠಶಾಲೆಯ ಬಸವ ಯೋಗ ಕೇಂದ್ರ ಮತ್ತು ಶ್ರೀ ಜಗದ್ಗುರು ತೋಂಟದಾರ್ಯ ಜಾತ್ರಾ ಮಹೋತ್ಸವ ಸಮಿತಿ ಇವರು ಬೇಸಿಗೆ ರಜೆ ಪ್ರಯುಕ್ತ ಶಾಲಾ ಮಕ್ಕಳಿಗೆ ಆಯೋಜಿಸಲಾಗಿದ್ದ 21 ದಿನಗಳ ಸಂಸ್ಕೃತಿ-ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಗಣ್ಯ ವರ್ತಕ ಹಾಗೂ ತೋಂಟದಾರ್ಯ ಜಾತ್ರಾ ಸಮಿತಿ ಕೋಶಾಧ್ಯಕ್ಷ ಉಮೇಶ ನಾಲ್ವಾಡ, ಮಕ್ಕಳು ಒಳ್ಳೆಯವರಾಗಿ ಬೆಳೆಯಲು ಇಂಥ ಶಿಬಿರಗಳು ಸಹಕಾರಿಯಾಗಿವೆ ಎಂದರು. ವೇದಿಕೆಯಲ್ಲಿ ನಿವೃತ್ತ ಶಿಕ್ಷಕ ಜಿ. ಪಿ. ಕಟ್ಟಿಮನಿ ಗುರುಗಳು, ಬಸವ ತತ್ವಾಭಿಮಾನಿ ಶಂಕ್ರಣ್ಣ ಅಂಗಡಿ, ದೈಹಿಕ ಶಿಕ್ಷಣ ಶಿಕ್ಷಕ ಎಸ್. ಎಂ. ಬುರಡಿ, ವಚನ ಸಂಗೀತಗಾರ್ತಿ ಸುನಂದಾ ಜ್ಯಾನೋಪಂತರ ಉಪಸ್ಥಿತರಿದ್ದರು. ವಿಶೇಷವಾಗಿ ಶಿಬಿರಾರ್ಥಿಗಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ರಮ್ಯಾ ಜಗ್ಗಲ, ವಾಸವಿ ಸುರೆಬಾನ, ಚಂದ್ರು ಪೂಜಾರ, ಸಮೀಕ್ಷಾ ಕೋಳೂರು, ಹಾಡು ಹೇಳಿದರು. ಅನುಷ್ಕಾ ಹಿರೇಮಠ, ಸಿಮ್ರಾನ್ ನದಾಫ್ ಶುಶ್ರುತ ಗುಡದೂರ ಸಂಗೀತ ನೃತ್ಯ ಮಾಡಿದರು. ಕಿರಣ ಬೀಳಗಿ, ಅರ್ಜುನ ಬೇಲಿ ಮತ್ತು ಸಂಗಡಿಗರು ಯೋಗಾಸನ ಪ್ರದರ್ಶಿಸಿದರು. ಪ್ರಣವಗೌಡ ಪಾಟೀಲ, ನಿಧಿ ಕಟ್ಟಿಮನಿ, ಪ್ರತೀಕ್ಷಾ ಚನ್ನು ಶಿಬಿರದ ಬಗ್ಗೆ ಅನಿಸಿಕೆ, ಅಭಿಪ್ರಾಯಗಳನ್ನು ತಿಳಿಸಿದರು. ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಕಾರ್ತಿಕ ಬೆಂತೂರ, ಗಿರಿಜಾ ನಾಲತ್ವಾಡಮಠ, ಸುಮಾ ಸುರೇಬಾನ, ಸಿದ್ಧಲಿಂಗೇಶ್ವರ ಶಾಮಿಯಾನ ಬಂಧುಗಳು, ಗಿರಿಜಾ ಪಲ್ಲೇದ, ಮಹಾಂತೇಶ ಆಯಾಟಿ, ವಿಜಯಲಕ್ಷ್ಮೀ ಆನೆಹೊಸೂರ, ಅಶೋಕ ಜಿನಗಿ, ಪ್ರಭು ಹವಳದ, ಅರುಣಾ ಇಂಗಳಳ್ಳಿ, ದಾವಲಬಿ ನದಾಫ, ವೀಣಾ ಅಕ್ಕಮ್ಮನವರ, ನವೀನ ಬುರಡಿ, ರಾಜೇಶ್ವರಿ ಭಾಂಡಗೆ ಇನ್ನಿತರರು ಇದ್ದರು.

# ಶಿರಹಟ್ಟಿಯಲ್ಲಿ ಸಶಸ್ತ್ರ ಮೀಸಲು ಪಡೆಗಳಿಂದ ಪಥ ಸಂಚಲನ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ



ಮತದಾರರಿಗೆ ಆತ್ಮಸ್ಥೈರ್ಯ ತುಂಬುವುದಕ್ಕಾಗಿ ಪಟ್ಟಣದಲ್ಲಿ ಡಿಎಸ್‌ಪಿ ಎಂ.ಬಿ.ಸಂಕದ ನೇತೃತ್ವದಲ್ಲಿ ಪ್ರಮುಖ ಬೀದಿಗಳಲ್ಲಿ ಪಥ ಸಂಚಲನ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಐ ವಿಕಾಸ್ ಲಮಾಣಿ, ಚುನಾವಣೆಯ ದಿನದಂದು ಮತದಾರರ ಪಟ್ಟಿಯಲ್ಲಿರುವಂತಹ ಎಲ್ಲ ಮತದಾರರು ನಿರ್ಭೀತಿಯಿಂದ ಮತದಾನ ಕೇಂದ್ರಕ್ಕೆ ಆಗಮಿಸಿ ಮತದಾನ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕು. ಪೊಲೀಸ್ ಇಲಾಖೆ ಸದಾ ನಿಮ್ಮ ಜೊತೆ ಇರುತ್ತದೆ. ಅದಕ್ಕಾಗಿಯೇ ಇಲಾಖೆಯು ಇಂತಹ ಪಥಸಂಚಲನಗಳನ್ನು ಆಯೋಜಿಸಿದೆ ಎಂದರು.

ಇದಕ್ಕೂ ಮೊದಲು ಶಿರಹಟ್ಟಿಯ ಪೊಲೀಸ್ ಠಾಣೆಯಿಂದ ಪಥಸಂಚಲನವು ಪ್ರಾರಂಭವಾಗಿ, ಕೆಳಗೇರಿ ಓಣಿ, ಮರಾಠಾ ಓಣಿ, ಮೇಗೇರಿ ಓಣಿ, ಕುರುಬರ ಓಣಿ, ವಾಲ್ಮೀಕಿ ವೃತ್ತ, ಕಪ್ಪತ್ತನವರ ವೃತ್ತ, ಅಂಬೇಡ್ಕರ ರಸ್ತೆ, ನೆಹರು ವೃತ್ತ, ಬಸವೇಶ್ವರ ವೃತ್ತದ ಮೂಲಕ ಪುನ: ಪೊಲೀಸ್ ಠಾಣೆವರೆಗೂ ನಡೆಯಿತು. ಇದರಲ್ಲಿ 200ಕ್ಕೂ ಅಧಿಕ ಎಸ್‌ಎಸ್‌ಬಿ ಮತ್ತು ಆರ್‌ಪಿಎಫ್ ಹಾಗೂ ಸ್ಥಳೀಯ ಸಿಬ್ಬಂದಿಗಳು ಭಾಗಿಯಾಗಿದ್ದರು. ಮೆರವಣಿಗೆಯುದ್ದಕ್ಕೂ ಯೋಧರಿಗೆ ಹೂಮಳೆ ಸುರಿಸಲಾಯಿತು.

ಬಜಾರ ರಸ್ತೆಯಲ್ಲಿ ಮಾಜಿ ಯೋಧ ದೇವೇಂದ್ರಪ್ಪ ಪವಾರ ಸೇರಿದಂತೆ ಅನೇಕರು ಯೋಧರಿಗೆ ಹೂಮಾಲೆಯನ್ನು ಹಾಕಿ ಗೌರವ ಸಮರ್ಪಿಸಿದರು. ಮಹಿಳೆಯರು ಯೋಧರಿಗೆ ಆರತಿಯನ್ನು ಬೆಳಗಿದ್ದು ವಿಶೇಷವಾಗಿತ್ತು.

ಶಿರಹಟ್ಟಿ ತಾಪಂ ಇಓ ಎಸ್.ನಾರಾಯಣ, ಶಿರಹಟ್ಟಿ ಪಿಎಸ್‌ಐ ಈರಣ್ಣ ರಿತ್ತಿ, ಆರ್‌ಪಿಐ ಚೌಧರಿ, ಮುಖ್ಯಾಧಿಕಾರಿ ಸಿದ್ದರಾಯ ಕಟ್ಟಿಮನಿ, ಡಾ. ಪವನ ಫಾಯದೆ, ಅಜಯ ಪವಾರ, ಪರಶುರಾಮ ಡೊಂಕಬಳ್ಳಿ ಮುಂತಾದವರು ಉಪಸ್ಥಿತರಿದ್ದರು.

# ಕಾಂಗ್ರೆಸ್ ತೊರೆದ ಕುರುಹಿನಶೆಟ್ಟಿ ಸಮಾಜದ ಮುಖಂಡರು

■ ವಿಜಯಸಾಕ್ಷಿ ಸುದ್ದಿ, ಗದಗ



ಬೆಟಗೇರಿಯ ಕುರುಹಿನಶೆಟ್ಟಿ ಸಮಾಜದ ಕಾಂಗ್ರೆಸ್‌ನ ನೂರಾರು ಮುಖಂಡರು, ಕಾರ್ಯಕರ್ತರು ಬಿಜೆಪಿ ಅಭ್ಯರ್ಥಿ ಅನಿಲ್ ಮೆಣಸಿನಕಾಯಿ ನೇತೃತ್ವದಲ್ಲಿ ಬಿಜೆಪಿ ಸೇರ್ಪಡೆಗೊಂಡರು. ಭಾನುವಾರ ಬೆಟಗೇರಿಯ ವೀರಭದ್ರೇಶ್ವರ ದೇವಸ್ಥಾನದ ಸುಗಂಧಿಯವರ ಕಟ್ಟಡದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಕುರಹಿನಶೆಟ್ಟಿ ಸಮಾಜದ ಮುಖಂಡರಾದ ಚನ್ನಪ್ಪ ಕೋಡಗಂಟಿ, ಜಯಪ್ಪ ಅಣ್ಣಿಗೇರಿ, ಈಶ್ವರ ಅಣ್ಣಿಗೇರಿ, ಈರಣ್ಣ ಅಣ್ಣಿಗೇರಿ, ಬಾಬು ಕರಡಿ, ಅಂದಪ್ಪ ದಿವಟೆ, ಗಿರೀಶ್ ಕೋಡಗಂಟಿ, ಪರಶುರಾಮ ಸೂರೆ, ರವಿ ದಿವಟೆ, ಮಲ್ಲಪ್ಪ ಅಣ್ಣಿಗೇರಿ ಸೇರಿದಂತೆ ಅನೇಕರು ಕಾಂಗ್ರೆಸ್ ಪಕ್ಷ ತೊರೆದು ಬಿಜೆಪಿ ಸೇರ್ಪಡೆಗೊಂಡರು.

ಈ ವೇಳೆ ಮಾತನಾಡಿದ ಅನಿಲ್ ಮೆಣಸಿನಕಾಯಿ ಕುರುಹಿನಶೆಟ್ಟಿ ಸಮಾಜಕ್ಕೆ ತನ್ನದೇಯಾದ ಹಿನ್ನೆಲೆ, ಪರಂಪರೆ ಇದೆ. ಈಗ ಈ ಸಮಾಜದವರು ಬಿಜೆಪಿ ಸೇರ್ಪಡೆಗೊಂಡಿರುವುದು ಮತ್ತಷ್ಟು ಬಲ ನೀಡಿದೆ. ಮೇ 10ರಂದು ನಡೆಯುವ ಚುನಾವಣೆಯಲ್ಲಿ ಕಮಲದ ಗುರುತಿಗೆ ಮತ ನೀಡಿ ನನ್ನನ್ನು ಗೆಲ್ಲಿಸಿ ನಿಮ್ಮ ಸೇವೆಗೆ ಅವಕಾಶ ಮಾಡಿ ಕೊಡಿ ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ದೇವಪ್ಪ ಗೋಟೂರ, ಹನಮಂತಪ್ಪ ಶ್ಯಾವಿ, ಲಕ್ಷ್ಮಿ ಕಾಕಿ, ಆನಂದ ಶ್ಯಾವಿ, ರವಿ ಗಂಜಿ, ಪ್ರಕಾಶ್ ಹಿಂಡಿ, ಚಂದ್ರಶೇಖರ್ ಶ್ಯಾವಿ, ಶರಣಪ್ಪ ಗದ್ದನಕೇರಿ, ಈರಣ್ಣ ಡಾಣಿ, ಚೆನ್ನಪ್ಪ ನೆಗಳೂರ, ನಾರಾಯಣಪ್ಪ ಕೋಣಿ, ರಾಘವೇಂದ್ರ ಶ್ಯಾವಿ, ನಾಗರಾಜ್ ಅಮ್ರದ, ದಶರಥರಾಜ ಕೊಳ್ಳಿ, ನಾರಾಯಣ ಜುಟ್ಲಾ, ಹನಮಂತಪ್ಪ ಅಳವಂಡಿ ಸೇರಿದಂತೆ ಹಲವರಿದ್ದರು.

# ಶಿವಾನುಭವ ಗೋಷ್ಠಿ, ಬಸವ ಜಯಂತಿ ಕಾರ್ಯಕ್ರಮ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಅಡವೀಂದ್ರ ಸ್ವಾಮಿಮಠದಲ್ಲಿ ಮಂಗಳವಾರ ಸಂಜೆ 6.30 ಗಂಟೆಗೆ 311ನೇ ಮಾಸಿಕ ಶಿವಾನುಭವ ಗೋಷ್ಠಿ ಹಾಗೂ ಬಸವ ಜಯಂತಿ ಕಾರ್ಯಕ್ರಮ ನಡೆಯಲಿದೆ.

ಸಮ್ಮುಖವನ್ನು ಶ್ರೀಮಠದ ಧರ್ಮದರ್ಶಿ ಮಹೇಶ್ವರ ಸ್ವಾಮಿಗಳು ಹೊಸಳ್ಳಿಮಠ ವಹಿಸುವರು. ಅಧ್ಯಕ್ಷತೆಯನ್ನು ಶಿವಾನುಭವ ಸಮಿತಿಯ ಅಧ್ಯಕ್ಷ ವ್ಹಿ.ಎಂ.ಕುಂದ್ರಾಳಹಿರೇಮಠ ವಹಿಸುವರು. ಶಿಕ್ಷಕ ಎಂ.ಎಂ.ಜೋಗಿನ 'ಶರಣ ಸಾಹಿತ್ಯದಲ್ಲಿ ಮಹಿಳಾ ಪರ ನಿಲುವುಗಳು' ವಿಷಯವಾಗ ಉಪನ್ಯಾಸ ನೀಡುವರು.

ಅತಿಥಿಗಳಾಗಿ ನ್ಯಾಯ ವಾದಿಗಳಾದ ಎಂ.ಎಂ.ಹಿರೇಮಠ, ಶ್ರೀಮತಿ ಕಲ್ಪನಾ ಹಿರೇಮಠ ಆಗಮಿಸುವರು. ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ವ್ಹಿ.ಬಾಳಿಕಾಯಿ ಅವರಿಗೆ ಶ್ರದ್ಧಾಂಜಲಿ ನಡೆಯಲಿದೆ. ಪ್ರಸಾದ ಸೇವೆಯನ್ನು ಆನಂದ ಹಿರೇಮಠ, ಶ್ರೀನಿವಾಸ ಅರಸಿದ್ಧಿ, ಯು. ಆರ್.ಭೂಸನೂರಮಠ ವಹಿಸುವರು ಎಂದು ಪ್ರಧಾನ ಕಾರ್ಯದರ್ಶಿ ವಿನಾಯಕ ಸಜ್ಜನ ತಿಳಿಸಿದ್ದಾರೆ.



ನರೇಗಲ್ಲ ಪಟ್ಟಣದ ವೈಶ್ಯ ಸಮಾಜದವರು ಇಲ್ಲಿನ ಕಾಳಿಕಾಂಬಾ ದೇವಸ್ಥಾನದಲ್ಲಿ ಸಾಂಪ್ರದಾಯಿಕವಾಗಿ ವಾಸವಿ ಜಯಂತಿಯನ್ನು ಆಚರಿಸಿದರು. ಈ ಸಂದರ್ಭದಲ್ಲಿ ಸಮಾಜದ ಹಿರಿಯರು, ಸುಮಂಗಲೆಯರು ಇದ್ದರು.

# 'ಕಾರ್ಮಿಕರು ದೇಶದ ಅಭಿವೃದ್ಧಿಯ ಬೆನ್ನೆಲುಬು'



■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಕಾರ್ಮಿಕರು ದೇಶದ ಅಬಿವೃದ್ಧಿಯ ಬೆನ್ನೆಲುಬು ಎಂದು ಉದಯ ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷ ಮಹ್ಮದಶಫಿ ಸಿದ್ದಿ ಹೇಳಿದರು.

ಅವರು ಪಟ್ಟಣದ ಉದಯ ಕಟ್ಟಡ ಕಾರ್ಮಿಕ ಸಂಘದ ಕಚೇರಿಯಲ್ಲಿ ಕಾರ್ಮಿಕ ದಿನಾಚರಣೆ ಅಂಗವಾಗಿ ಜರುಗಿದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹನುಮಂತಪ್ಪ ಕಟ್ಟಿಮನಿ, ಗಣೇಶ ಅರಳಿಕಟ್ಟಿ, ಶಂಕರ ಕಮ್ಮಾರ, ತಿರಕಪ್ಪ ಹರ್ತಿ, ಗಿರೀಶ ಕಮಾಜಿ, ಆನಂದ ಲಾಳಿ, ರಾಜು ಎಲುವಿಗಿ, ಮೌಲಾಸಾಬ ಸದರಭಾವಿ, ಮಮ್ಮದರಫಿಕ ಸುಂಕದ, ಇಮಾಮಸಾಬ ಚಿಂಚಲಿ, ಪ್ರಭು ಬೂದಿಹಾಳ, ಅರ್ಜುನ ಬಡಿಗೇರ, ಮಂಜುನಾಥ ಬುದಿಹಾಳ, ಪಕ್ರುಸಾಬ ಕುರ್ತಕೋಟಿ, ಖಲಂದರ ಮುಲ್ಲಾ ಇದ್ದರು.



ಗದಗ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅನಿಲ್ ಮೆಣಸಿನಕಾಯಿ ಅವರ ಪರ ಸಹೋದರಿ ಪ್ರೀತಿ ಹಾಗೂ ಸಿದ್ದಲಿಂಗೇಶ ಮೆಣಸಿನಕಾಯಿ ಅವರ ಧರ್ಮಪತ್ನಿ ರೋಹಿಣಿ ಮೆಣಸಿನಕಾಯಿ ಗದಗ-ಬೆಟಗೇರಿ ಅವಳಿ ನಗರದ 12ನೇ ವಾರ್ಡಿನಲ್ಲಿ ಮತಯಾಚಿಸಿದರು. ಈ ಸಂದರ್ಭದಲ್ಲಿ ನಗರಸಭೆ ಸದಸ್ಯೆ ವಿಜಯಲಕ್ಷ್ಮೀ ದಿಂಡೂರ, ಮುಖಂಡರಾದ ಶಶಿಧರ್ ದಿಂಡೂರ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು ಇದ್ದರು.

## ನಿಧನ ವಾರ್ತೆ

### ಯಲ್ಲಪ್ಪ ಉಮಚಗಿ



**ಮುಳಗುಂದ:** ಪಟ್ಟಣದ ಚಿಂದಿಪೇಟಿ ಓಣಿಯ ನಿವಾಸಿ ಯಲ್ಲಪ್ಪ ಉಮಚಗಿ(ಡೋಣಿ) (87) ರವಿವಾರ ನಿಧನರಾಗಿದ್ದಾರೆ. ಮೃತರಿಗೆ ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗ ಇದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka